ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 30 ಅಕ್ಟೋಬರ್ 7, 1979 40 ಪೈಸೆ

ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರ

ಗ್ರಾಮ ಪಂಚಾಯುತಿಗಳೇ ಪ್ರಜಾಪ್ರಭುತ್ವದ ಮೂಲವೆಂದೂ, ಅಧಿಕಾರ ವಿಕೇಂದ್ರೀಕರಣ ಮಾಡಿ ಈ ಸಂಸ್ಥೆಗಳಿಗೆ ಅಧಿಕ ಅಧಿಕಾರ ಕೊಡುತ್ತೇವೆಂದೂ ಆಳುವ ವರ್ಗಗಳು ಕಳೆದ ಮೂವತ್ತು ವರ್ಷಗಳಿಂದಲೂ ಹೇಳಿಕೊಂಡು ಬಂದಿದ್ದರೂ ವಾಸ್ತವವಾಗಿ ಅಧಿಕಾರದ ಕೇಂದ್ರೀಕರಣ ನಡೆದಿದೆಯೇ ಹೊರತು ವಿಕೇಂದ್ರೀಕರಣವು ಘೋಷಣೆಯಾಗಿಯೇ ಉಳಿದಿದೆ. ಆದರೆ, ಇತ್ತೀಚೆಗೆ ನಡೆದ ಕರ್ನಾಟಕ ರಾಜ್ಯದ ಪಂಚಾಯತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರ ಸಮ್ಮೇಳನದಲ್ಲಿ ರಾಜ್ಯದ ಮುಖ್ಯಮಂತ್ರಿಯವರು ಈ ಸಂಸ್ಥೆಗಳಿಗೆ ಹೆಚ್ಚು ಅಧಿಕಾರವನ್ನೂ, ಆದಾಯವನ್ನೂ ಕೊಡುವ ಆಶ್ವಾಸನೆಯನ್ನು ಕೊಟ್ಟಿರುವುದು ಸ್ವಾಗತಾರ್ಹವಾಗಿದೆ. ಇದು ಎಷ್ಟರ ಮಟ್ಟಿಗೆ ಕಾರ್ಯಗತಗೊಳ್ಳುವುದೆಂಬುದನ್ನು ನೋಡಬೇಕಾಗಿದೆ.

ಈಗಂತೂ ಈ ಸಂಸ್ಥೆಗಳು ತೋರಿಕೆಗೆ ಮಾತ್ರವಿರುತ್ತವೆ. ಬಹುತೇಕ ಕಡೆ ಅವು ಹಳ್ಳಿ ಪ್ರದೇಶದ ಪಟ್ಟಭದ್ರಶಕ್ತಿಗಳ ಹಿಡಿತದಲ್ಲಿವೆ. ಸಾಮಾನ್ಯವಾಗಿ ಗುಂಪು ಘರ್ಷಣೆಗಳಲ್ಲೇ ತೊಡಗಿರುವ ಈ ಸಮಿತಿಗಳಲ್ಲಿ ಜನತೆಯ ಕೆಲಸಕಾರ್ಯಗಳು ನಡೆಯುವುದು ಅಪರೂಪ. ಈಗಿನ ವರ್ಗ ಸಮಾಜ

ಸಂಪಾದಕೀಯ

ದಲ್ಲಿ ದುಡಿಯುವ ಜನತೆಯ ಸಂಘಟನೆಗಳು ಇಲ್ಲದಿರುವ ಪ್ರದೇಶಗಳಲ್ಲಿ ಈ ಸಂಸ್ಥೆಗಳು ಶೋಷಕ ವರ್ಗದ ವ್ಯಕ್ತಿಗಳಿಗೆ ಆಡಂಬರದ ಸ್ಥಾನಗಳಾಗಿ ಮಾತ್ರ ಉಳಿದಿದೆ. ಆದರೆ ರೈತ ಕಾರ್ಮಿಕರ ಸಂಘಟನೆಗಳು ಬೆಳೆದಂಥಾ ಪ್ರದೇಶಗಳಲ್ಲಿ, ಶ್ರಮಜೀವಿಗಳ ಪ್ರತಿನಿಧಿಗಳು ಆರಿಸಲ್ಪಟ್ಟಾಗ ಈ ಸಂಸ್ಥೆಗಳು ಚುರುಕಾಗಿ ಕೆಲಸಮಾಡುವುದಲ್ಲದೆ ಜನತೆಗೆ ಸ್ವಲ್ಪ ಮಟ್ಟಿಗಾದರೂ ಸಹಾಯವಾಗುತ್ತದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಅಧಿಕಾರದ ವಿಕೇಂದ್ರೀಕರಣವನ್ನ ಪ್ರತಿಪಾದಿಸುತ್ತದೆ. ಪಶ್ಚಿಮ ಬಂಗಾಳದಲ್ಲಿ ಭೂಸುಧಾರಣೆಯನ್ನು ಜಾರಿಗೊಳಿಸುವ ಅಧಿಕಾರವನ್ನು ಸಹ ಗ್ರಾಮಪಂಚಾಯತಿಗಳಿಗೆ ಕೊಡಲಾಗಿದೆ. ನಿಜವಾದ ಜನತೆಯ ಪ್ರತಿನಿಧಿಗಳು ಇದ್ದರೆ ಮಾತ್ರ ಇದು ಸಾಧ್ಯ.

ಈಗಿನ ಚೌಕಟ್ಟಿನೊಳಗೆ ಈ ಪಂಚಾಯತಿಗಳು ಮಾಡಬೇಕಾದ ಕೆಲಸಗಳು ಸಹ ಬಹಳ ಇವೆ. ಸರಕಾರ ಈಗ ನೀಡಲು ಉದ್ದೇಶಿಸಿದ ಹೆಚ್ಚಿನ ಹಣಕಾಸಿನ ಸೌಲಭ್ಯಗಳನ್ನೂ, ಅಧಿಕಾರವನ್ನೂ ನಮ್ಮ ಚುನಾಯಿತ ಪ್ರತಿನಿಧಿಗಳು ಎಚ್ಚರಿಕೆಯಿಂದ ನಿರ್ವಹಿಸಲೆಂದು ನಮ್ಮ ಹಾರೈಕೆ.

●

ಅಕ್ಟೋಬರ್ ಕೊನೆಯಲ್ಲಿ ಬೆಂಗಳೂರಿನಲ್ಲಿ

ಕಿಸಾನ್ ಸಭಾ ಕೇಂದ್ರ ಸಮಿತಿ ಸಭೆ

ಅಕ್ಟೋಬರ್ ತಿಂಗಳ 26, 27 ಮತ್ತು 28 ರಂದು ಅಖಿಲಭಾರತ ಕಿಸಾನ್ ಸಭೆಯ ಕೇಂದ್ರ ಸಮಿತಿಯ ಸಭೆಯು ಬೆಂಗಳೂರಿನಲ್ಲಿ ಪ್ರ-ಪ್ರಥಮವಾಗಿ ಸೇರಲಿದೆ. ಸೆಪ್ಟೆಂಬರ್ 27 ರಂದು ಕಾಂ. ಎಚ್. ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯ ಕಾರ್ಯಕಾರಿ ಸಮಿತಿಯು ಕರ್ನಾಟಕದಲ್ಲಿ ಕಿಸಾನ್ ಸಭಾ ಕೇಂದ್ರ ಸಮಿತಿ ಸಭೆ ಸೇರುವುದನ್ನು ಸ್ವಾಗತಿಸಿದೆ. ಈ ಅಧಿವೇಶನವನ್ನು ಯಶಸ್ವಿಗೊಳಿಸಲು ಪ್ರಾಂತ ರೈತಸಂಘದ ಎಲ್ಲಾ ಘಟಕಗಳೂ ರಾಜ್ಯದಾದ್ಯಂತ ಸತತವಾಗಿ ಮುಂದಿನ ಒಂದು ತಿಂಗಳು ಶ್ರಮಿಸಬೇಕೆಂದು ರಾಜ್ಯಸಮಿತಿಯು ಕರೆಯಿತ್ತಿದೆ.

ಕೇಂದ್ರ ಕಿಸಾನ್‌ಸಮಿತಿಯು ಮುಖ್ಯವಾಗಿ ಕೃಷಿಕೂಲಿಗಾರರು, ಬಗ್ಗಾದಾರರು, ಸಣ್ಣರೈತರು ಮತ್ತು ಮಧ್ಯಮ ರೈತರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವರ ಬೇಡಿಕೆಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಿದೆ. ವಿವಿಧ ರಾಜ್ಯಗಳಲ್ಲಿ ಭೂಸುಧಾರಣಾ ಕಾನೂನುಗಳು ಹೇಗಿವೆ ಮತ್ತು ಹೇಗೆ ಜಾರಿಗೊಳ್ಳುತ್ತಿವೆ ಎಂಬುದರ ಬಗ್ಗೆ ವಿಮರ್ಶಿಸಲಿದೆ.

ಈ ಅಧಿವೇಶನವು ದೇಶದ ಈಗಿನ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಿ, ಗ್ರಾಮೀಣ ಪ್ರದೇಶದ ಬಡಜನರಿಗೆ ಮುಂದಿನ ಚುನಾವಣೆಯಲ್ಲಿ ಸರಿಯಾದ ಪಾತ್ರವಹಿಸಲು ಕರೆಯೀಯಲಿದೆ.

ಅಕ್ಟೋಬರ್ 28 ರಂದು ಬೆಂಗಳೂರಿನಲ್ಲಿ ರೈತ-ಕಾರ್ಮಿಕರ ಬೃಹತ್ ಮೆರವಣಿಗೆ ಸಭೆಗಳನ್ನು ಜರಗಿಸಲು ರಾಜ್ಯ ಸಮಿತಿಯು ತೀರ್ಮಾನಿಸಿದೆ. ಬಹಳ ಕ್ಲಿಷ್ಟ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಜರಗಲಿರುವ ಈ ಮೇಳವನ್ನು ಯಶಸ್ವಿಗೊಳಿಸಲು ಕೋಲಾರ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ತುಮಕೂರುಜಿಲ್ಲೆ, ಮೈಸೂರು ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಗಳಿಂದ ರೈತರು, ಕೃಷಿಕೂಲಿಗಾರರು ಮತ್ತು ಕಾರ್ಮಿಕರನ್ನು ದೊಡ್ಡ ಪ್ರಮಾಣದಲ್ಲಿ ಸೇರಿಸಲು ಪ್ರಯತ್ನಿಸಬೇಕೆಂದು ರಾಜ್ಯಸಮಿತಿಯು ಜಿಲ್ಲಾ ಸಮಿತಿಗಳಿಗೆ ಕರೆ ಇತ್ತಿದೆ.

ಅಕ್ಟೋಬರ್‌ನಲ್ಲಿ ಸೇರಲಿರುವ ಈ ಕಿಸಾನ್‌ಸಭಾ ಕೇಂದ್ರ ಸಮಿತಿ ಸಭೆಯಲ್ಲಿ ಕಿಸಾನ್‌ಸಭಾ ಅಧ್ಯಕ್ಷರು ಮತ್ತು ಪಶ್ಚಿಮ ಬಂಗಾಲದ ರೆವಿನ್ಯೂ ಮಂತ್ರಿಗಳಾದ ಕಾಂ. ಬಿನೋಯ್ ಚೌಧರಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೊ ಸದಸ್ಯರುಗಳು ಮತ್ತು ಕಿಸಾನ್ ಕೇಂದ್ರ ಸಮಿತಿಯ ಸದಸ್ಯರುಗಳಾದ ಕಾಂ. ಎಂ. ಬಿ. ಬಸವಪುನ್ನಯ್ಯ, ಕಾಂ. ಹರಿಕಿಷನ್ ಸಿಂಗ್ ಸುರ್ಜೀತ್ ಅವರುಗಳು, ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಕಾಂ. ಚಾತುಣ್ಣಿ ಮಾಸ್ಟರ್ ಮತ್ತು ಇತರ ಮುಂದಾಳುಗಳು ಭಾಗವಹಿಸಲಿರುವರು. ●

ಕೋಮು ಮತ್ತು ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಲು

ರಾಜ್ಯ ಮಟ್ಟದ ಸಮಾವೇಶ

"ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಸೆಪ್ಟೆಂಬರು 28 ಮತ್ತು 29 ರಂದು ಬೆಂಗಳೂರಿನಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಮ್. ಎಸ್. ನಂಬೂದಿರಿಪಾದ್ ಅವರ ಸಮ್ಮುಖದಲ್ಲಿ ಸೇರಿತು. ಮುಂಬರುವ ಲೋಕಸಭಾ ಚುನಾವಣೆಯ ಬಗ್ಗೆ ಪಕ್ಷದ ಕೇಂದ್ರ ಸಮಿತಿಯ ತೀರ್ಮಾನ ಮತ್ತು ಅನುಸರಿಸಬೇಕಾದ ತಂತ್ರಗಳ ಬಗ್ಗೆ ಪ್ರಧಾನ ಕಾರ್ಯದರ್ಶಿಯವರು ವರದಿಯನ್ನಿತ್ತರು.

ಪ್ರಸಕ್ತ ರಾಜಕೀಯ ಪರಿಸ್ಥಿತಿ ಬಗ್ಗೆ ವಿಮರ್ಶಿಸುತ್ತಾ ಶ್ರೀ ದೇವರಾಜ ಅರಸು ಅವರು ಇಂದಿರಾಗಾಂಧಿ ಸರ್ವಾಧಿಕಾರದ ವಿರುದ್ಧ ದಿಟ್ಟ ನಿಲುವುಯನ್ನು ತಳೆದು ಹೋರಾಡುತ್ತಲಿರುವುದರ ಬಗ್ಗೆ ರಾಜ್ಯಸಮಿತಿ ಸಂತಸ ವ್ಯಕ್ತಪಡಿಸಿತು. ಕೇವಲ ಘೋಷಣೆಗಳಿಂದ ಸರ್ವಾಧಿಕಾರದ ವಿರುದ್ಧ ಹೋರಾಡುವುದು ಸಾಧ್ಯವಿಲ್ಲ ಬದಲು ಜನತೆ ಮತ್ತು ಶ್ರಮಜೀವಿಗಳ ನೇರವಾದ ಧೋರಣೆಗಳನ್ನು ಅನುಸರಿಸುವುದರಿಂದ ಮಾತ್ರ ಸಾಧ್ಯ ಎಂಬುದಾಗಿ ರಾಜ್ಯ ಸಮಿತಿಯು ಅಭಿಪ್ರಾಯಪಟ್ಟಿತು.

ಸರ್ವಾಧಿಕಾರ ಮತ್ತು ಕೋಮು ಶಕ್ತಿಗಳು ಪ್ರಜಾಪ್ರಭುತ್ವದ ತಳಪಾಯವನ್ನ ಬುಡಮೇಲು ಮಾಡಲು ಯತ್ನಿಸುವ ಈ ಸಂದರ್ಭದಲ್ಲಿ, ಈ ಅಪಾಯಕಾರಕ ಶಕ್ತಿಗಳನ್ನು ಜನತೆಯಿಂದ ಪ್ರತ್ಯೇಕಿಸಿ ಸೋಲಿಸುವುದೇ ಎಲ್ಲಾ ಎಡ, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಶಕ್ತಿಗಳ ಆದ್ಯಕರ್ತವ್ಯವಾಗಿದೆ ಎಂದು ರಾಜ್ಯಸಮಿತಿಯು ಅಭಿಪ್ರಾಯಪಟ್ಟಿತು. ಎಡಪಕ್ಷಗಳಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಸಿ. ಪಿ. ಐ. ಗಳಿಗೆ ಇದರಲ್ಲಿ ವಿಶೇಷ ಪಾತ್ರವಿದೆ ಎಂದೂ ಅಭಿಪ್ರಾಯ ಮಾಡಲಾಯಿತು.

ಈ ದೃಷ್ಟಿಯನ್ನಿಟ್ಟುಕೊಂಡು ಸಿ. ಪಿ. ಐ. ದೇವರಾಜ ಅರಸ್ ನೇತೃತ್ವದ ಕರ್ನಾಟಕ ಕಾಂಗ್ರೆಸ್, ರಿಪಬ್ಲಿಕನ್ ಪಕ್ಷ ಮತ್ತಿತರ ಸಮಾನ ಅಭಿಪ್ರಾಯವಿರುವ ಪಕ್ಷ, ಗುಂಪು ಮತ್ತು ವ್ಯಕ್ತಿಗಳೊಡನೆ ಸೇರಿ ಸರ್ವಾಧಿಕಾರ ಮತ್ತು ಕೋಮುವಾದಿಗಳ ವಿರುದ್ಧ ಬಿರುಸಾದ ಪ್ರಚಾರ, ಪ್ರಕ್ಷೋಭೆಗಳನ್ನು ನಡೆಸಲು ತೀರ್ಮಾನಿಸಲಾಯ್ತು. ಇದರ ಮೊದಲ ಹಂತವಾಗಿ ಈ ಉದ್ದೇಶಗಳನ್ನು ಹೊಂದಿರುವ ಇತರೆ ಎಲ್ಲಾ ಪಕ್ಷಗಳು, ಗುಂಪುಗಳು ಮತ್ತು ವ್ಯಕ್ತಿಗಳೊಡಗೂಡಿ ಅಕ್ಟೋಬರ್ ತಿಂಗಳ ಕೊನೆಯ ಭಾಗದಲ್ಲಿ ಬೆಂಗಳೂರಿನಲ್ಲಿ ಉಳಿದವರಿಗೂ ಅನುಕೂಲವಾಗುವ ಒಂದು ದಿನ ಬೃಹತ್ ಸಮಾವೇಶವನ್ನು ನಡೆಸಲು ತೀರ್ಮಾನಿಸಲಾಯ್ತು. ಅಂದು ಜಂಟೀ ಪ್ರಯತ್ನದಿಂದಬೃಹತ್ ಸಭೆಯನ್ನೂ ಸೇರಿಸಬೇಕೆಂದು ತೀರ್ಮಾನಿಸಲಾಯ್ತು. ರಾಜ್ಯಮಟ್ಟದ ಸಮಾವೇಶವಾದ ಮೇಲೆ ಜಿಲ್ಲಾ ಮತ್ತು ಸ್ಥಳೀಯ ಮಟ್ಟದಲ್ಲೂ ಇದನ್ನು ನಡೆಸಬೇಕೆಂದೂ ಅಭಿಪ್ರಾಯಪಡಲಾಯಿತು. ಈ ಪ್ರಕ್ಷೋಭೆಯಲ್ಲಿ ಶ್ರಮಜೀವಿಗಳನ್ನು ದೊಡ್ಡ ಪ್ರಮಾಣದಲ್ಲಿ ಪಾಲ್ಗೊಳ್ಳುವಂತೆ ಮಾಡಲು ತೀರ್ಮಾನಿಸಲಾಯ್ತು.

ಈ ಮೇಲಿನ ತುರ್ತು ರಾಜಕೀಯ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು, ಕರ್ನಾಟಕ ರಾಜ್ಯದಲ್ಲಿ ಸಿ. ಪಿ. ಐ. ಶ್ರೀ ಅರಸ್ ನೇತೃತ್ವದ ಕರ್ನಾಟಕ ಕಾಂಗ್ರೆಸ್ ಮತ್ತಿತರ ಸಮಾನ ಅಭಿಪ್ರಾಯವನ್ನು ಹೊಂದಿದ ಪಕ್ಷಗಳೊಂದಿಗೆ ತಿಳುವಳಿಕೆ ಮತ್ತು ಸಹಕಾರದಿಂದ ಒಗ್ಗಟ್ಟಾಗಿ ಹೋರಾಡಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಮತ್ತು ಆರ್. ಎಸ್.ಎಸ್. ಜನಸಂಘ ನಿಯಂತ್ರಿತ ಜನತಾ ಪಕ್ಷಗಳೆರಡನ್ನೂ ಸೋಲಿಸಲು ಮುಂದಾಗಲು ತೀರ್ಮಾನಿಸಿತು. ಈ ದೃಷ್ಟಿಯನ್ನಿಟ್ಟುಕೊಂಡು ಉಳಿದಪಕ್ಷಗಳೊಂದಿಗ ಮಾತುಕತೆ ನಡೆಸಲೂ ಮತ್ತು ಅನುಕೂಲವಿರುವೆಡೆ ಕೆಲವು ಸ್ಥಾನಗಳಿಗೆ ಸ್ಪರ್ಧಿಸಲೂ ರಾಜ್ಯಸಮಿತಿಯು ತೀರ್ಮಾನಿಸಿತು.

●

ಸರ್ವಾಧಿಕಾರ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ರಾಷ್ಟ್ರೀಯ ಸಮಾವೇಶ

ನವದೆಹಲಿಯಲ್ಲಿ ಸೆ. 18 ರಂದು ಕೋಮು ಮತ್ತು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ರಾಷ್ಟ್ರೀಯ ಸಮಾವೇಶ ಜರುಗಿತು. ಆ ಸಮಾವೇಶ ಅಂಗೀಕರಿಸಿದ ಕರಡು ನಿರ್ಣಯದ ಪೂರ್ಣ ಪಾಠವನ್ನು ನಮ್ಮ ವಾಚಕರಿಗೆ ಇಲ್ಲಿ ಕೊಡಲಾಗಿದೆ.

ರಾಷ್ಟ್ರವು ಆಶಿಸುವ ಆದರ್ಶಗಳಾದ ಜಾತ್ಯಾತೀತತೆ, ಪ್ರಜಾಸತ್ತೆ ಮತ್ತು ರಾಷ್ಟ್ರೀಯ ಏಕತೆಗಳು ಇಂದು ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳಿಂದ ಅಪಾಯಕ್ಕೆ ಒಳಗಾಗುವ ಪರಿಸ್ಥಿತಿ ಬರುತ್ತಿರುವುದಕ್ಕೆ ಈ ರಾಷ್ಟ್ರೀಯ ಸಮಾವೇಶವು ತನ್ನ ತೀವ್ರ ಕಳಕಳಿಯನ್ನು ವ್ಯಕ್ತಪಡಿಸುತ್ತದೆ. ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳು ಕೇಂದ್ರದಲ್ಲಿ ಅಧಿಕಾರ ಸ್ಥಾಪಿಸಲು ಹವಣಿಸುತ್ತಿರುವುದನ್ನು ತಡೆಯಲು ಈ ಸಮಾವೇಶವು ಎಲ್ಲ ಜಾತ್ಯಾತೀತ ವಾದಿಗಳಿಗೆ, ಜನತಾಂತ್ರಿಕ ಪಕ್ಷಗಳಿಗೆ, ಸಾಮೂಹಿಕ ಸಂಘಟನೆಗಳಿಗೆ ಮತ್ತು ವ್ಯಕ್ತಿಗಳಿಗೆ ಕರೆ ಕೊಡುತ್ತದೆ. ಈ ಮತೀಯ ಮತ್ತು ಸರ್ವಾಧಿಕಾರಿ ಶಕ್ತಿಗಳು ಈಗಾಗಲೇ ಅನೇಕ ರಾಜ್ಯ ಸರ್ಕಾರಗಳಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿವೆ.

ಮುಂಬರುವ ಲೋಕಸಭಾ ಉಪ ಚುನಾವಣೆಗಳನ್ನು. ತಾನು ಮತ್ತೆ ಅಧಿಕಾರಕ್ಕೆ ವಾಪಸು ಬರಲು ಉಪಯೋಗಿಸಿಕೊಳ್ಳಬೇಕೆಂಬುದನ್ನು ಸರ್ವಾಧಿಕಾರವನ್ನು ಬಹಿರಂಗವಾಗೇ ಪ್ರತಿಪಾದಿಸುವ ಇಂದಿರಾ ಕಾಂಗ್ರೆಸ್ ವ್ಯಕ್ತಪಡಿಸಿದೆ. ದೆಹಲಿಯಲ್ಲಿ ನಡೆದ ಆ ಪಕ್ಷದ ಎ. ಐ. ಸಿ. ಸಿ. ಅಧಿವೇಶನದ ಗೊತ್ತುವಳಿಗಳು ಇದನ್ನು ಸ್ಪಷ್ಟಪಡಿಸಿವೆ. ಇಂದಿರಾ ಕಾಂಗ್ರೆಸ್ ಪಕ್ಷವೇನಾದರೂ ಈ ಸಲ ಸಂಸತ್ತಿನಲ್ಲಿ ಅಲ್ಪ ಬಹುಮತ ಪಡೆದ ತನ್ನ ಪಕ್ಷದ ಸರ್ಕಾರ ರಚಿಸಲು ಸಮರ್ಥವಾದುದಾದರೆ ಅದು ಮತ್ತೆ ತುರ್ತುಪರಿಸ್ಥಿತಿಯ ಎಲ್ಲ ಮರ್ದಕ ಕ್ರಮಗಳನ್ನು ಜನತೆಯ ಮೇಲೆ ತರುತ್ತದೆ ಎಂಬುದನ್ನು ಸಂಬಂಧಪಟ್ಟವರೆಲ್ಲ ಅರಿತುಕೊಳ್ಳಬೇಕು. ಜನತೆಯು ಬಹು ದೀರ್ಘ ಕಾಲದಿಂದ ಹೋರಾಡಿ ಗಳಿಸಿದ್ದ ಸಂಘಟನೆಯ ಹಕ್ಕು, ವಾಕ್ ಸ್ವಾತಂತ್ರ ಸಭೆ ಸೇರುವ ಸ್ವಾತಂತ್ರ ಮುಂತಾದ ನಾಗರೀಕ ಹಕ್ಕುಗಳನ್ನು ಇಂದಿರಾ ಕಾಂಗ್ರೆಸ್ ಸರ್ಕಾರವು ಜನತೆಯಿಂದ ಕಿತ್ತುಕೊಳ್ಳುತ್ತದೆ.

ಷಾಹ ಮತ್ತು ಗುಪ್ತಾ ಆಯೋಗಗಳು ವಿಚಾರಣೆ ಮಾಡಿ ತಯಾರಿಸಿರುವ ವರದಿಗಳಿಂದ ತುರ್ತುಸ್ಥಿತಿಯ ದುಷ್ಟಕೂಟದ ಪರಿಣಾಮಗಳು ಜನತೆಯ ಮೇಲೆ ಎಂತಹವು ಎಂಬುದು ನಮಗೆಲ್ಲ ಸ್ಪಷ್ಟವಿದೆ. ಮಾಜೀ ಪ್ರಧಾನಿ. ಆಕೆಯ ಕುಟುಂಬದ ಸದಸ್ಯರು ಮತ್ತು ಸ್ನೇಹಿತರು ತಮ್ಮ ಅಧಿಕಾರವನ್ನು, ತಾವು ಶ್ರೀಮಂತಗೊಳ್ಳುವುದಕ್ಕೆ ಉಪಯೋಗಿಸಿಕೊಂಡರು ಎಂಬುದನ್ನೂ ಈ ವರದಿಗಳು ಹೇಳಿವೆ. ಸ್ಥಾನ ದುರುಪಯೋಗವನ್ನು ಪ್ರತಿಭಟಿಸಿದವರನ್ನು ದಮನಿಸಲಾಗುತ್ತಿತ್ತು ಎಂಬುದನ್ನೂ ಈ ವರದಿಗಳೇ ಹೇಳಿವೆ. ಕಾಂಗ್ರೆಸ್ (ಐ) ಪಕ್ಷವು ಮತ್ತೆ ಅಧಿಕಾರ ಸ್ಥಾಪಿಸುವುದೆಂದರೆ ಈ ಪರಿಸ್ಥಿತಿಯ ಪುನರಾವರ್ತನೆಯೇ ಆಗುವುದು ಎಂಬುದು ಸ್ವಯಂ ವೇದ್ಯ.

ಹರಿಜನ-ಗಿರಿಜನರ ಮತ್ತು ಅಲ್ಪಸಂಖ್ಯಾತರ ರಕ್ಷಣೆಯ ಬಗ್ಗೆ ಇಂದಿರಾ ಗಾಂಧಿಯು ಈಗ ಮತ್ತೆ ಕಣ್ಣೀರು ಸುರಿಸಲಾರಂಭಿಸಿದ್ದಾರೆ. ಆದರೆ ಅಧಿಕಾರದಲ್ಲಿ ಇದ್ದ 11 ವರ್ಷಗಳ ಅವಧಿಯಲ್ಲಿ ಆಕೆ ಇವರ ರಕ್ಷಣೆಗೆ ಮಾಡಿದ್ದಾದರೂ ಏನು ?

ಜನತಾಪಕ್ಷವನ್ನು ತನ್ನ ಪ್ರಾಭಲ್ಯ ದಡಿ ಇಟ್ಟುಕೊಂಡಿರುವ ಆರ್. ಎಸ್. ಎಸ್. ತನ್ನ ಆಕಾಂಕ್ಷೆಗಳನ್ನು ಸ್ಪಷ್ಟವಾಗಿ ತಿಳಿಸಿದೆ. ಜನತಾಪಕ್ಷದ ಎರಡುವರೆ ವರ್ಷಗಳ ಆಡಳಿತೆಯಲ್ಲಿ ಆರ್. ಎಸ್. ಎಸ್. ತನ್ನ ಪ್ರಭಾವವನ್ನು ಜನತೆಯ ಆರ್ಥಿಕ-ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ವಿಸ್ತರಿಸಲು ಎಲ್ಲ ಪ್ರಯತ್ನಗಳನ್ನು ಮಾಡಿತು. ಮತ್ತು ಇದಕ್ಕಾಗಿ ಸರ್ಕಾರದಲ್ಲಿದ್ದ ತನ್ನವರ ಸ್ಥಾನಮಾನಗಳನ್ನು ಅದು ದುರುಪಯೋಗ ಮಾಡಿಕೊಂಡಿತು. ಇದರ ಫಲಿತಾಂಶವನ್ನು ನಾವೆಲ್ಲಾ ಕಣ್ಣಾರೆ ಕಂಡಿದ್ದೇವೆ. ಆರ್. ಎಸ್. ಎಸ್. ನವರು ಅಲೀಘರ್ ಮತ್ತು ಜಮ್‌ಷೆಡ್‌ಪುರ ಮುಂತಾದ ಕಡೆಗಳಲ್ಲಿ ಮತೀಯ ಗಲಭೆಗಳನ್ನು ಸಂಘಟಿಸಿದ್ದರು ಎಂಬುದು ಸ್ಪಷ್ಟ. ವರ್ಣಾಶ್ರಮ ಧರ್ಮ ಮತ್ತು ಜಾತಿ ಪದ್ಧತಿಯನ್ನು ಉಳಿಸಿಕೊಂಡು ಬಂದು ಗ್ರಾಮೀಣ ಬಡ ಜನತೆಯ ಮೇಲೆ ಸದಾ ಹಿಡಿತ ಇಟ್ಟುಕೊಳ್ಳುವುದು ಈ ಸಂಘಟನೆಯ ಉದ್ದೇಶವಾಗಿದೆ. ಎಲ್ಲ ರಾಜ್ಯ ಸರ್ಕಾರಗಳು, ರಾಜ್ಯ ಮಟ್ಟದ ಆಡಳಿತಗಳನ್ನು ರದ್ದುಗೊಳಿಸಿ ಅತ್ಯಂತ ಶಕ್ತಿ ಹೊಂದಿದ ಕೇಂದ್ರ ಸರ್ಕಾರದ ಆಡಳಿತ ಬೇಕೆಂದು ಆರ್.ಎಸ್.ಎಸ್. ಪ್ರತಿಪಾದಿಸುತ್ತಿದೆ. ಇದು ದೇಶದ ಏಕತೆಗೆ ಭಂಗತರುವಂತಹುದು. ಆರ್. ಎಸ್. ಎಸ್. ಈಗ ಕೇಂದ್ರದಲ್ಲಿ ಅಧಿಕಾರದಲ್ಲಿ ಇಲ್ಲದಿದ್ದರೂ ಕೇಂದ್ರ ಸರಕಾರದಲ್ಲಿನ ಅಧಿಕಾರಶಾಹಿಯ ಒಂದು ಭಾಗವು ಅದರ ಹಿಡಿತದಲ್ಲಿದೆ. ಆರ್. ಎಸ್. ಎಸ್. ಮುಖವಾಣಿಯಾದ ಆರ್ಗನೈಸರ್ ಮತ್ತು ಪ್ರಾಂತೀಯ ಭಾಷೆಗಳಲ್ಲಿನ ಅವರ ಎಲ್ಲ ಪತ್ರಿಕೆಗಳು ಆರ್. ಎಸ್. ಎಸ್. ಪ್ರಚಾರವನ್ನು ಈ ನಿಟ್ಟಿನಲ್ಲಿ ಮಾಡುತ್ತಿದ್ದಾರೆ. ಈ ಮೇಲಿನಪರಿಸ್ಥಿತಿಯನ್ನು ವೀಕ್ಷಿಸಿದಾಗ, ಆರ್. ಎಸ್. ಎಸ್. ಸಂಸ್ಥೆಯು ಕೇವಲ ಒಂದು ಸಾಂಸ್ಕೃತಿಕ ಸಂಘಟನೆ ಮತ್ತು ಅದಕ್ಕೆ ಯಾವ ರಾಜಕೀಯ ಅಪೇಕ್ಷೆಗಳೂ ಇಲ್ಲ ಎಂಬುದನ್ನು ಯಾರೂ ನಂಬಲು ಸಾಧ್ಯವಿಲ್ಲ.

ಈ ಸಮಾವೇಶದಲ್ಲಿ ಒಂದು ರಂಗದ ಮೇಲೆ ಬಂದಿರುವ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಜನ ವಿರೋಧಿಯಾದ ಸರ್ವಾಧಿಕಾರಿ ಮತ್ತು ಕೋಮುವಾದಿಗಳ ವಿರುದ್ಧ ಹೋರಾಡಿಕೊಂಡು ಬಂದಿದ್ದಾರೆ. ಆದರೆ ಈಗ ಅವರು ಒಗ್ಗಟ್ಟಾಗಿ ಆರ್. ಎಸ್. ಎಸ್. ಮತ್ತು ಇಂದಿರಾ ಕಾಂಗ್ರೆಸ್ ಪಕ್ಷಗಳನ್ನು ಎದುರಿಸಲು ಇಲ್ಲಿ ಸೇರಿದ್ದಾರೆ. ಪರಸ್ಪರರಲ್ಲಿ ಭಿನಾಭಿಪ್ರಾಯಗಳಿದ್ದರೂ ಈ ಎರಡು ದುಷ್ಟಶಕ್ತಿಗಳ ವಿರುದ್ಧ ಮೊದಲು ಒಗ್ಗಟ್ಟಾಗಿ ಹೋರಾಡಬೇಕೆಂದು ಈ ಸಮಾವೇಶವು ಅವರಿಗೆ ಕರೆ ಕೊಡುತ್ತದೆ. ಮುಂದಿನ ಮೂರು ತಿಂಗಳಿನಲ್ಲಿ ಚುನಾವಣೆಗಳು ನಡೆಯುವ ಸಮಯಕ್ಕೆ ಜನತೆಯ ಮುಂದೆ ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳ ಪ್ರಶ್ನೆ ಮತ್ತು ಅವರ ಕೆಡುಕುಗಳನ್ನು ಒಂದು ಪ್ರಮುಖ ಪ್ರಶ್ನೆಯನ್ನಾಗಿ ಎಲ್ಲ ಪ್ರಗತಿವಾದಿಗಳು ಪ್ರಜಾಪ್ರಭುತ್ವ ಪ್ರೇಮಿಗಳು ತರುತ್ತಾರೆಂದು ಈ ಸಮಾವೇಶವು ಆಶಿಸುತ್ತದೆ.

ಜನತೆಯನ್ನು ಬಾಧಿಸುತ್ತಿರುವ ತತ್‌ಕ್ಷಣದ ಇನ್ನೂ ಅನೇಕ ಸಮಸ್ಯೆಗಳು ಇವೆ ಎಂಬುದು ಈ ಸಮಾವೇಶಕ್ಕೆ ಗೊತ್ತಿದೆ. ಕೋಮುವಾರು ಮತ್ತು ಮತೀಯ ಶಕ್ತಿಗಳು ಬಂಡವಾಳಗಾರರ ಮತ್ತು ಜಮೀನ್ದಾರರ ಹಿತರಕ್ಷಣೆಗೆ ನಿಂತಿರುವುದರಿಂದ ಅವನ್ನು ಹೋರಾಡುವುದು ಜನತೆಯ ಮೂಲಭೂತ ಸಮಸ್ಯೆಗಳ ಪರಿಹಾರಕ್ಕೇ ಹೋರಾಡಿದಂತೆ. ಬೆಲೆಏರಿಕೆ, ಬರಗಾಲ, ನಿರುದ್ಯೋಗ ಮುಂತಾದ ಸಮಸ್ಯೆಗಳಿಂದ ಜನತೆಯ ನಡುವೆ ಬೆಳೆಯುತ್ತಿರುವ ಅಸಮಾದಾನವನ್ನು ಉಪಯೋಗಿಸಿಕೊಳ್ಳಲು ಈ ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳು ಹವಣಿಸುತ್ತಿವೆ. ಆದ್ದರಿಂದ ಜನತೆಯನ್ನು ಬಾಧಿಸುವ ಈ ಸಮಸ್ಯೆಗಳನ್ನು ನಿವಾರಿಸಬೇಕೆಂದು ಸಂಬಂಧಪಟ್ಟವರನ್ನು ಈ ಸಮಾವೇಶವು ಒತ್ತಾಯಿಸುತ್ತದೆ.

ದುಡಿಯುವ ಜನತೆ. ಕಾರ್ಮಿಕ ವರ್ಗ, ರೈತರು, ಮಹಿಳೆಯರು, ಯುವಜನರು ಮುಂತಾದ ಜನ ವಿಭಾಗಗಳನ್ನು ನಾವು ಸಂಘಟಿಸಿ ಮೂಲಭೂತ ಬದಲಾವಣೆಗೆ ಹೋರಾಡಬೇಕಾಗಿದೆ. ಮತೀಯ ಅಲ್ಪಸಂಖ್ಯಾತರು, ಹರಿಜನ-ಗಿರಿಜನರು ಮತ್ತು ಹಿಂದುಳಿದ ವರ್ಗಗಳೂ ಸಂಘಟಿತಗೊಂಡು ತಮ್ಮ ಅಸ್ತಿತ್ವಕ್ಕೆ ಹೋರಾಡಬೇಕಾಗಿದೆ.

ದುಡಿಯುವ ಜನಸಮೂಹದ ಸಂಘಟನೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿರುವ ಅನೇಕ ಕಾರ್ಯಕರ್ತರು ಈ ಸಮಾವೇಶದ ಪ್ರತಿನಿಧಿಗಳಾಗಿದ್ದಾರೆ. ಜನತೆಯ ವಿರುದ್ಧ ಸಮರ ಸಾರಿರುವ ಮತೀಯ ಮತ್ತು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಅವರು ಕೈಗೂಡಿಸಿದ್ದಾರೆ. ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳ ವಿರುದ್ಧದ ಹೋರಾಟವು ಮೂಲಭೂತ ಹೋರಾಟದ ಒಂದು ಅವಿಭಾಜ್ಯ ಅಂಗ ಎಂಬುದನ್ನು ಈ ಸಮಾವೇಶವು ಎಲ್ಲ ಟ್ರೇಡ್ ಯೂನಿಯನ್ ಸಂಘಟನೆಗಳಿಗೂ ಎಲ್ಲ ಸಾಮೂಹಿಕ ಸಂಘಟನೆಗಳಿಗೂ ಮತ್ತೆ ನೆನಪು ಮಾಡಿಕೊಡಬಯಸುತ್ತದೆ.

ಸರ್ವಾಧಿಕಾರ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುತ್ತಿರುವ ಎಲ್ಲರೂ ರಾಜಕೀಯ ಹೋರಾಟ ಮತ್ತು ಸಂಘಟನೆಗಳ ಹೋರಾಟದ ನಡುವೆ ಇರುವ ಅವಿಭಾಜ್ಯ ಸಂಬಂಧಗಳನ್ನು ಮುಂದಿನ ದಿವಸಗಳಲ್ಲಿ ಅವರಾಗೇ ಕಾಣುತ್ತಾರೆ ಎಂದು ಸಮ್ಮೇಳನವು ಆಶಿಸುತ್ತದೆ. ಕಾರ್ಮಿಕ ವರ್ಗವು ತಾನು ಗಳಿಸಿರುವ ಹಕ್ಕುಗಳ ರಕ್ಷಣೆಗೆ ಹೆಜ್ಜೆಹೆಜ್ಜೆಗೂ ಈಗ ಹೋರಾಡಬೇಕಾಗಿದೆ. ಆದ್ದರಿಂದ ಕಾರ್ಮಿಕವರ್ಗದ ದಿನನಿತ್ಯದ ಹೋರಾಟಗಳ ಜೊತೆಗೆ ಸರ್ವಾಧಿಕಾರಿ ಮತ್ತು ಮತೀಯವಾದಿಗಳ ವಿರುದ್ಧದ ಹೋರಾಟವು ತೀರಾ ಅಗತ್ಯವಿದೆ ಎಂಬುದನ್ನು ಕಾರ್ಮಿಕ ಸಂಘಟನೆಗಳು ಅರಿತುಕೊಳ್ಳಬೇಕು ಎಂದು ಈ ಸಮ್ಮೇಳನ ಕರೆಕೊಡುತ್ತದೆ.

ಮುಂಬರುವ ಲೋಕಸಭಾ ಚುನಾವಣೆಗಳು ಕಾರ್ಮಿಕ ವರ್ಗಕ್ಕೆ ಒಂದು ಅವಕಾಶವನ್ನು ಒದಗಿಸಿಕೊಡುತ್ತಿವೆ. ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳನ್ನು ಪ್ರತಿನಿಧಿಸುವ ಕಾಂಗ್ರೆಸ್ (ಐ) ಮತ್ತು ಆರ್.ಎಸ್.ಎಸ್. ಹಿಡಿತದ ಜನತಾ ಪಕ್ಷವನ್ನು ಕಾರ್ಮಿಕ ವರ್ಗ ಮತ್ತು ಇತರೆ ದುಡಿಯುವ ವಿಭಾಗಗಳು ಸೋಲಿಸಬೇಕು. ಈ ಶಕ್ತಿಗಳನ್ನು ಸೋಲಿಸದಿದ್ದರೆ ಇಂದಿರಾ ಕಾಂಗ್ರೆಸ್ ಪಕ್ಷವು ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುವ ಅಪಾಯವಿದೆ. ಜನತಾ ಪಕ್ಷದ ಒಳಗೇ ಇರುವ ಇನ್ನೂ ಕೆಲವು ಜಾತ್ಯಾತೀತ ವಿಭಾಗಗಳ ನೆರಳಿನಲ್ಲಿ ಆರ್. ಎಸ್. ಎಸ್. ಕೂಡ ತನ್ನ ಪ್ರಭಾವವಲಯವನ್ನು ವಿಸ್ತರಿಸುವ ಅಪಾಯವೂ ಇದೆ. ಆದ್ದರಿಂದ ಎಲ್ಲ ಪ್ರಜಾಪ್ರಭುತ್ವವಾದಿಗಳೂ, ಜಾತ್ಯಾತೀತ ಶಕ್ತಿಗಳೂ ಒಗ್ಗಟ್ಟಾಗುವುದು ಈಗ ಒಂದು ಆದ್ಯ ಕರ್ತವ್ಯವಾಗಿದೆ. ಸಂಘಟಿತ ಹಾದಿಯಲ್ಲಿ ಮುನ್ನುಗ್ಗಿ ಜನ ವಿರೋಧಿಗಳಾದ ಈ ಎರಡು ಅನಿಷ್ಟಗಳನ್ನು ಸೋಲಿಸುವುದು ಜನಸಮೂಹದ ವಿಜಯವಾಗುತ್ತದೆ. ಕಾಂಗ್ರೆಸ್ (ಐ) ಮತ್ತು ಆರ್. ಎಸ್. ಎಸ್. ಹಿಡಿತದ ಜನತಾ ಪಕ್ಷದ ಸೋಲು ಎಲ್ಲ ಪ್ರಗತಿವಾದಿಗಳ, ಜಾತ್ಯಾತೀತವಾದಿಗಳ ಮತ್ತು ಪ್ರಜಾಪ್ರಭುತ್ವ ಪ್ರೇಮಿಗಳ ಗೆಲುವು ಎಂದು ಈ ಸಮಾವೇಶ ಭಾವಿಸುತ್ತದೆ.

●

ಅ. 17ರ ಪ್ರತಿಭಟನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಬೀಡಿ ಫೆಡರೇಷನ್ ಕರೆ

ಕರ್ನಾಟಕ ರಾಜ್ಯ ಬೀಡಿ ಫೆಡರೇಷನಿನ ಸಭೆಯು ಅಕ್ಟೋಬರ್ 3 ರಂದು ಬೆಂಗಳೂರಿನಲ್ಲಿ ಬೀಡಿ ಫೆಡರೇಷನಿನ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಜ್ಯ ಫೆಡರೇಷನಿನ ಕಾರ್ಯದರ್ಶಿ ಕಾಂ. ಮಹಮದ್ ದಸ್ತಗೀರ್ ಮತ್ತು ಬೇರೆಬೇರೆ ಪ್ರದೇಶದ ಪ್ರತಿನಿಧಿಗಳಿಂದ ಪ್ರದೇಶದ ವರದಿಗಳನ್ನು ಇತ್ತು, ಚರ್ಚಿಸಲಾಯ್ತು. ಅಕ್ಟೋಬರ್ 17 ರಂದು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ರಾಷ್ಟ್ರದಾದ್ಯಂತ ಪ್ರತಿಭಟನಾ ಕಾರ್ಯಕ್ರಮ ಹಾಕಲು ಅಖಿಲಭಾರತ ಬೀಡಿ ಮತ್ತು ಸಿಗಾರ್ ಫೆಡರೇಷನಿನ ಸಮಿತಿಯು ಕರೆ ಕೊಟ್ಟ ಮೇರೆಗೆ, ರಾಜ್ಯದಲ್ಲಿ ಯಶಸ್ವಿಗೊಳಿಸಲು ನಡೆಸುವ

[7ನೇ ಪುಟ ನೋಡಿ]

ಜನತೆಗೆ ಕಟ್ಟುಬಿದ್ದ ಪಕ್ಷ ನಮ್ಮದು: ಇ. ಎಂ. ಎಸ್.

ನಮ್ಮ ಪಕ್ಷವು ದುಡಿಯುವ ಜನಸಮುದಾಯಕ್ಕೆ ಕಟ್ಟು ಬಿದ್ದಿದೆಯೇ ಹೊರತು ಯಾವುದೇ ರಾಜಕೀಯ ಪಕ್ಷಕ್ಕಾಗಲೀ ಅಥವ ಯಾವುದೇ ವೈಯಕ್ತಿಕ ರಾಜಕೀಯ ನಾಯಕರಿಗೆ ಕಟ್ಟುಬಿದ್ದಿಲ್ಲ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದಿರಿಪಾದ್ ಅವರು ಘೋಷಿಸಿದರು.

ಕಾಂ. ಇ. ಎಂ. ಎಸ್. ಅವರು ಬೆಂಗಳೂರಿನಲ್ಲಿ ಸೆ. 28 ರಂದು ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. "ನಿಮಗೆ ಬೆಂಬಲ ಕೊಡುತ್ತೇವೆ, ನಿಮ್ಮನ್ನು ರಕ್ಷಿಸುತ್ತೇವೆ ಎಂದು ಯಾವುದೇ ರಾಜಕೀಯ ಪಕ್ಷಕ್ಕಾಗಲಿ ಅಥವ ನಾಯಕರಿಗಾಗಲೀ ನಾವೇನೂ ಬರೆದು ಕೊಟ್ಟಿಲ್ಲ. ನಾವು ಇರುವುದು ದುಡಿಯುವ ಜನರ ಹಿತಾಸಕ್ತಿಗಳನ್ನು ರಕ್ಷಿಸಲು" ಎಂದರು. "ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನಮಗೆ ದ್ರೋಹ ಮಾಡಿತು" ಎಂದು ದೇಶದ ತುಂಬಾ ಪ್ರಚಾರ ಮಾಡಿಕೊಂಡು ಬರುತ್ತಿರುವ ಮಾಜಿ ಪ್ರಧಾನಿ ಹಾಗೂ ಜನತಾ ನಾಯಕ ಮುರಾರ್ಜಿ ಅವರಿಗೆ ಸಿ. ಪಿ. ಎಂ. ಕಾರ್ಯದರ್ಶಿಗಳು ಕೊಟ್ಟ ಉತ್ತರ ಇದು. ಜನತೆಗೆ ದ್ರೋಹ ಬಗೆದ ಸರ್ಕಾರಕ್ಕೆ ನಾವೆಂದೂ ಬೆಂಬಲ ಕೊಡಲು ಸಾಧ್ಯವಿಲ್ಲ ಎಂಬುದನ್ನು ಮುರಾರ್ಜಿ ಮತ್ತು ಅವರಂತಹ ನಾಯಕರು ಅರಿಯಲಿ ಎಂದರು ಇ. ಎಂ. ಎಸ್.

ಜನರ ಹಿತಾಸಕ್ತಿಗಳಿಗೆ ಅನುಕೂಲವಾದ ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ಧತಿ ಮುಂತಾದ ನೀತಿಗಳಿಗೆ ಸಂಬಂಧಪಟ್ಟಂತೆ ತಮ್ಮ ಪಕ್ಷವು ಇಂದಿರಾಗಾಂಧಿಗೆ ಬೆಂಬಲ ಮಾಡಿತು. ಈ ನೀತಿಗಳನ್ನು ಆಗ ವಿರೋಧಿಸಿದ ಮುರಾರ್ಜಿ ದೇಸಾಯಿಯವರನ್ನು ವಿರೋಧಿಸಿತು. ಆದರೆ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಮರ್ದನ ಮಾಡಿದಾಗ ತಮ್ಮ ಪಕ್ಷವು ಮುರಾರ್ಜಿಯವರ ಜೊತೆಗೂಡಿ ಇಂದಿರಾಗಾಂಧಿಯ ಸರ್ಕಾರವನ್ನು ಕಿತ್ತು ಹಾಕಿತು. ಮತ್ತೆ ಮುರಾರ್ಜಿ ಸರ್ಕಾರವು ಕೋಮುವಾದಿ ಆರ್. ಎಸ್. ಎಸ್ಸಿಗರ ಹಿಡಿತಕ್ಕೆ ಹೋದಾಗ ಮತ್ತು ಮುಂಜಾಗರೂಕತಾ ಶಾಸನವನ್ನು ಮತ್ತೆ ತಂದು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡಲು ಹೊರಟಾಗ ಮುರಾರ್ಜಿ ಸರ್ಕಾರವನ್ನು ಬೀಳಿಸುವುದರಲ್ಲಿ ಇಂದಿರಾಗಾಂಧಿಯೂ ಸೇರಿದಂತೆ ಬೇರೆಯರ ಸಂಗಡ ನಿಂತಿತು ಎಂದು ವಿವರಿಸಿದರು ಇ. ಎಂ. ಎಸ್. ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸುವಲ್ಲಿ ತಮ್ಮ ಪಕ್ಷವು ಪ್ರಧಾನ ಪಾತ್ರವಹಿಸುತ್ತಿದೆ ಎಂಬುದನ್ನು ಹೆಮ್ಮೆಯಿಂದ ನುಡಿದ ನಂಬೂದಿರಿಪಾದ್ ಅವರು ಈ ಹೊಸ ರಂಗದಲ್ಲಿ ಕಾರ್ಮಿಕರು, ಬುದ್ಧಿಜೀವಿಗಳು, ರೈತರು ಮತ್ತು ಜನಸಾಮಾನ್ಯರು ಒಂದು ಸೇರಬೇಕೆಂದು ಕರೆಕೊಟ್ಟರು.

ಕೋಮುವಾದಿಗಳನ್ನು ಮತ್ತು ಸರ್ವಾಧಿಕಾರಿಗಳನ್ನು ಹೋರಾಡಲು ಲೋಕದಳ ಮತ್ತು ಅರಸು ನೇತೃತ್ವದ ಕಾಂಗ್ರೆಸ್ ಪಕ್ಷವೂ ಮುಂದೆ ಬಂದಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಈ ಹೊಸ ರಂಗಕ್ಕೆ ಎಲ್ಲ ಎಡ ಪಂಥೀಯರು ಮತ್ತು ಪ್ರಜಾಪ್ರಭುತ್ವವಾದಿಗಳು ಬೆಂಬಲ ಕೊಡಬೇಕೆಂದು ಮನವಿ ಮಾಡಿದರು. ಇತರೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ ಈ ನಿಟ್ಟಿನಲ್ಲೇ ಯೋಚನೆ ಮಾಡುತ್ತಿರುವುದನ್ನು ಕಂಡು ತಮಗೆ ಮತ್ತು ತಮ್ಮ ಪಕ್ಷಕ್ಕೆ ಸಂತೋಷವಾಗಿದೆ ಎಂದು ಇ. ಎಂ. ಎಸ್. ಹೇಳಿದರು.

ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣ ರಾವ್ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ಬೆಂಗಳೂರು ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್ ಸ್ವಾಗತಿಸಿದರು. ●

ಮೈಕೋ ಕಾರ್ಮಿಕರಿಗೆ ಬೆಂಬಲ

ಸೆಪ್ಟೆಂಬರ್ 28 ಮತ್ತು 29 ರಂದು ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ಬೆಂಗಳೂರಿನ ಮೈಕೋ ಮ್ಯಾನೇಜುಮೆಂಟು ಅನುಸರಿಸುತ್ತಲಿರುವ ಕಾರ್ಮಿಕರ ವಿರೋಧಿ ಧೋರಣೆಗಳ ಬಗ್ಗೆ ಮತ್ತು ಈ ಬಹುರಾಷ್ಟ್ರೀಯ ಕಂಪೆನಿಯು ಫಾರಿನ್ ಎಕ್ಸ್‌ಚೇಂಜನ್ನು ಸೂರೆಗೊಳ್ಳುತ್ತಿರುವುದರ ಬಗ್ಗೆ ಚರ್ಚಿಸಿತು. ಮೈಕೋ ಕಾರ್ಮಿಕರು ಈ ಬಗ್ಗೆ ಪ್ರತಿಭಟನೆ ನಡೆಸುತ್ತಲಿದ್ದು, ಮ್ಯಾನೇಜುಮೆಂಟು ಕಾರ್ಮಿಕರಮೇಲೆ ಗದಾಪ್ರಹಾರ ನಡೆಸುತ್ತಲಿದೆ. ಕಾಲಾವಕಾಶವಿರುವ ಮೊದಲೇ ಸರಕಾರವು ಮಧ್ಯ ಪ್ರವೇಶ ಮಾಡಿ ಸಮಸ್ಯೆಯನ್ನು ಪರಿಹಾರ ಮಾಡುವಂತೆ ರಾಜ್ಯಸಮಿತಿಯು ಒತ್ತಾಯಿಸುತ್ತದೆ. ಮೈಕೋ ಮಾಲೀಕವರ್ಗದ ಕಾರ್ಮಿಕ ವಿರೋಧಿ ಕ್ರಮಗಳನ್ನು ಖಂಡಿಸಿದ ರಾಜ್ಯಸಮಿತಿಯು ಹೋರಾಡುವ ಕಾರ್ಮಿಕರಿಗೆ ಸಂಪೂರ್ಣ ಬೆಂಬಲವನ್ನಿತ್ತಿದೆ. ○

ಕಾರ್ಮಿಕರಿಗೆ ನ್ಯಾಯ ಒದಗಿಸಲು ಒತ್ತಾಯ

ಸೆಪ್ಟೆಂಬರ್ 28 ಮತ್ತು 29 ರಂದು ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ಬೆಂಗಳೂರಿನ ದಕ್ಷಿಣ ತಾಲ್ಲೂಕು ತಾತಗುಣಿ ಎಸ್ಟೇಟಿನ ಕಾರ್ಮಿಕರು, ಬೆಂಗಳೂರಿನಲ್ಲಿ ಹೋರಾಡುತ್ತಲಿರುವ ಹೊಟೇಲು ಕಾರ್ಮಿಕರು ಮತ್ತು ದಾಂಡೇಲಿಯ ಡಿ.ಎಫ್.ಎ. ಕಾರ್ಮಿಕರಿಗೆ ನ್ಯಾಯ ಒದಗಿಸಿ ಕೊಡುವುದರ ಬಗ್ಗೆ ತೆಪ್ಪಗಿರುವ ರಾಜ್ಯ ಸರ್ಕಾರ ಮತ್ತು ಸಂಬಂಧಿಸಿದ ಅಧಿಕಾರಿಗಳ ಧೋರಣೆಯನ್ನು ಖಂಡಿಸಿತು. ಮಾಲೀಕರು ಸತತವಾಗಿ ಕಾನೂನು ವಿರೋಧವಾಗಿ ಹೋದರೂ, ಕಾರ್ಮಿಕರಿಗೇ ಕಿರುಕುಳ ಕೊಡಲಾಗುತ್ತಿದೆ. ಕಳೆದ ಕೆಲವು ತಿಂಗಳುಗಳಿಂದ ಕಾರ್ಮಿಕರು ಹೋರಾಟದ ಪಥದಲ್ಲಿರುವರು. ಹೋರಾಟ ಮಾಡುತ್ತಲಿರುವ ಈ ಕಾರ್ಮಿಕರಿಗೆ ಬೆಂಬಲ ಕೊಡುವುದರೊಂದಿಗೆ, ರಾಜ್ಯ ಸರ್ಕಾರವು ತಕ್ಷಣ ಮಧ್ಯ ಪ್ರವೇಶಿಸಿ ನ್ಯಾಯ ಒದಗಿಸಿಕೊಡುವಂತೆಯೂ ಪಕ್ಷದ ರಾಜ್ಯ ಸಮಿತಿಯು ಒತ್ತಾಯಿಸಿದೆ. ●

ನನಸಾದ ಇ. ಎಂ. ಎಸ್. ಕನಸುಗಳು

ಕನಸುಗಳನ್ನು ಕಾಣದೆ ಯಾವ ಮನುಷ್ಯನೂ ಬದುಕಲಾರ. ಹಾಗೆಯೇ ನಾನೂ ಒಬ್ಬ ಕನಸುಗಾರ, ನಾನು ಕನಸುಗಳನ್ನು ಕಾಣುತ್ತೇನೆ ಎಂದು ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದಿರಿಪಾದ್ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ಹೇಳಿದರು.

ಬ್ರಿಟೀಷರ ಆಡಳಿತ ಈ ದೇಶದಿಂದ ತೊಲಗಬೇಕು. ಕಾಂಗ್ರೆಸ್ಸಿನ ಆಡಳಿತ ಈ ದೇಶದಲ್ಲಿ ಅಂತ್ಯವಾಗಬೇಕು. ಕೋಮುವಾದಿಗಳಾದ ಆರ್. ಎಸ್. ಎಸ್. ನವರ ಹಿಡಿತಕ್ಕೆ ಒಳಗಾದ ಮುರಾರ್ಜಿ ಸರ್ಕಾರ ಅಂತ್ಯವಾಗಬೇಕು ಎಂಬುದು ತಾವು ಮತ್ತು ತಮ್ಮಂತೆಯೇ ಹಲವರು ಕಂಡ ಕನಸುಗಳು ಎಂದು ಇ. ಎಂ. ಎಸ್. ಹೇಳಿ ಈ ಎಲ್ಲ ಕನಸುಗಳೂ ನನಸಾದವು ಎಂದು ಸಂತೋಷ ವ್ಯಕ್ತಪಡಿಸಿದರು.

ಕನಸುಗಳನ್ನು ಕಾಣುವುದನ್ನು ಮುಂದುವರಿಸುತ್ತಿದ್ದೇನೆ ಎಂದು ನುಡಿದ ಇ. ಎಂ. ಎಸ್. ಅವರು ಮುಂಬರುವ ಮಧ್ಯಕಾಲೀನ ಲೋಕಸಭಾ ಚುನಾವಣೆಗಳಲ್ಲಿ ಎಡ ಪಕ್ಷಗಳು ಎರಡು ಪಟ್ಟು ಸೀಟುಗಳ (90) ಗೆಲುವು ಪಡೆಯುತ್ತವೆ ಎಂಬ ಕನಸನ್ನು ಈಗ ಕಾಣುತ್ತಿದ್ದೇನೆ.

ಚರಣ್ ನೇತೃತ್ವದ ಲೋಕದಳ ಹಾಗೂ ಅರಸು ನೇತೃತ್ವದ ಕಾಂಗ್ರೆಸ್ ಪಕ್ಷಗಳ ಸರ್ಕಾರವು ಕೇಂದ್ರದಲ್ಲಿ ಅಧಿಕಾರಕ್ಕೆ ಬರುತ್ತದೆ ಎಂಬ ಕನಸನ್ನೂ ಕಾಣುತ್ತಿದ್ದೇನೆ. ಈ ಕನಸುಗಳೂ ನನಸಾಗಲಿವೆ ಎಂದು ಇ. ಎಂ. ಎಸ್. ಆಶಾಭಾವನೆ ವ್ಯಕ್ತಪಡಿಸಿದಾಗ ಸಭಿಕರಿಂದ ಹರ್ಷೋದ್ಗಾರದ ಚಪ್ಪಾಳೆಗಳ ಸ್ವಾಗತ.

ರಾಯಚೂರಿನ ಬಡ ಕಾರ್ಮಿಕರದೊಂದು ಹೊಸ ಸಂಘಟನೆ

ಹನ್ನೆರಡು ಗಂಟೆ ದುಡಿಮೆಗೆ ಐದೋ ಏಳೋ ರೂಪಾಯಿ ಕೂಲಿ. ಇನ್ನು ಬೋನಸ್, ಡಿ. ಎ. ಇತ್ಯಾದಿಗಳನ್ನು ಇವರು ಕಂಡೇ ಇಲ್ಲ. ಇದು ರಾಯಚೂರು ನಗರದ ವಿವಿಧ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಬದುಕಿನ ಬವಣೆ.

ಈ ಹೀನ ಸ್ಥಿತಿಯಿಂದ ಪಾರಾಗಲು ಈ ಕಾರ್ಮಿಕರು ಜನರಲ್ ವರ್ಕರ್ಸ್ ಯೂನಿಯನ್ ಕಟ್ಟಿದ್ದಾರೆ.

17 ಜನರ ಕಾರ್ಯಕಾರಿ ಸಮಿತಿಯಿರುವ ಈ ಸಂಘಕ್ಕೆ ಕೆಳಕಂಡ ಪದಾಧಿಕಾರಿಗಳನ್ನು ಆರಿಸಲಾಗಿದೆ:

1. ಚಂದ್ರಶೇಖರ ಬಾಳೆ-ಅಧ್ಯಕ್ಷರು 2. ರಿರ್ಷಿವಾನ-ಉಪಾಧ್ಯಕ್ಷರು 3. ಗೋವಿಂದ ರೆಡ್ಡಿ-ಉಪಾಧ್ಯಕ್ಷರು 4. ಪುರುಷೋತ್ತಮ ಕಲಾಲಬಂಧಿ-ಪ್ರಧಾನ ಕಾರ್ಯದರ್ಶಿ 5. ಜಿ. ಸುರೇಶ್-ಕಾರ್ಯದರ್ಶಿ 6. ಪ್ರಲ್ಹಾದಕಾರ-ಸಹಕಾರ್ಯದರ್ಶಿ 7. ಮಹಮ್ಮದ್ ಇಸ್ಮಾಯಿಲ್-ಸಹಕಾರ್ಯದರ್ಶಿ 8. ಶಿವಪುಟ್ಟಪ್ಪ-ಖಜಾಂಚಿ. ●

ಪ್ಲೈವುಡ್ ಕಾರ್ಮಿಕರ ಬವಣೆ

ಧಾರವಾಡ ನಗರದ ರೈಲ್ವೆ ಸ್ಟೇಷನ್ ಬಳಿಯ ಇಂಡಿಯನ್ ಪ್ಲೈವುಡ್ ಕಂಪನಿಯಲ್ಲಿ 800 ಕ್ಕೂ ಮಿಕ್ಕು ಕೆಲಸಗಾರರು ದುಡಿಯುತ್ತಾರೆ. ಇಲ್ಲಿಯ ವೇತನ ಒಬ್ಬ ಕೆಲಸಗಾರನಿಗೆ ಒಂದು ದಿನಕ್ಕೆ 4 ರಿಂದ 5 ರೂಪಾಯಿ ಇದೆ. ವರ್ಷಕ್ಕೆ ಬಡ್ತಿ 5 ಪೈಸೆಯಿಂದ 10 ಪೈಸೆಯವರೆಗೆ ಇದೆ ಎಂದು ಹೇಳುವುದಕ್ಕೂ ನಾಚಿಕೆಯಾಗುತ್ತದೆ. ಕಾರ್ಮಿಕರಿಗೆ ಯಾವ ರೀತಿಯ ನ್ಯಾಯವಾದ ಸವಲತ್ತುಗಳನ್ನೂ ಕಂಪೆನಿ ಒದಗಿಸಿಲ್ಲ; ಆದರೆ ಸುತ್ತಲಿನ ಅರಣ್ಯ ಸಂಪತ್ತನ್ನು ದೋಚಿ ಕಂಪೆನಿ ಕೋಟ್ಯಾಂತರ ರೂ.ಗಳನ್ನು ಗಳಿಸಿದೆ.

ಕಾರ್ಮಿಕರ ಪರಿಸ್ಥಿತಿಯನ್ನು ಹುಬ್ಬಳ್ಳಿಯ ಅಸಿಸ್ಟೆಂಟ್ ಲೇಬರ್ ಕಮೀಷನರ್, ಬೆಳಗಾಂನ ಡೆಪ್ಯುಟಿ ಲೇಬರ್ ಕಮೀಷನರ್, ಬೆಂಗಳೂರಿನ ಜಾಯಿಂಟ್ ಲೇಬರ್ ಕಮೀಷನರ್ ಇವರಿಗೆಲ್ಲ ವಿವರಿಸಿದ್ದಾಗಿದೆ. ಆದರೆ ಯಾವ ಪ್ರಯೋಜನವೂ ಆಗಿಲ್ಲ. ಕರ್ನಾಟಕ ಗೆಜೆಟ್ಟಿನ ಮೇ 1978ರ ಪ್ರತಿಯಲ್ಲಿ ಪ್ಲೈವುಡ್ ಕಾರ್ಮಿಕರಿಗೆ ಕನಿಷ್ಠ ವೇತನ ಕೊಡಬೇಕೆಂದು ನಿಗದಿಪಡಿಸಲಾಗಿತ್ತು. ಆದರೆ ಆಡಳಿತವರ್ಗದವರು ಹೈಕೋರ್ಟಿನಿಂದ ಇದಕ್ಕೆ ತಡೆಯಾಜ್ಞೆ ತಂದಿದ್ದಾರೆ. ಕಾರ್ಮಿಕರು ಈಗ ಸಂಘಟಿತರಾಗಿ ಹೋರಾಟ ನಡೆಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕಾಗಿದೆ. ಇತರ ವಲಯಗಳ ಕಾರ್ಮಿಕರ ಬೆಂಬಲ ಇದಕ್ಕೆ ಅಗತ್ಯವಾಗಿದೆ. ○

ಕಾಂ. ಅಂಗಾರ ಅವರಿಗೆ ಪತ್ನಿವಿಯೋಗ

ದಾವಣಗೆರೆ ಘಟಕದ ವಿಮಾ ನೌಕರರ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಕಾಂ. ಅಂಗಾರ ಅವರ ಪತ್ನಿ ಶೀಲವತಿ ಅವರು ನಿಧನರಾದರು. ಅವರಿಗೆ 33 ವರ್ಷ ವಯಸ್ಸಾಗಿತ್ತು. ಐಕ್ಯರಂಗ ಇವರ ಅಕಾಲಮರಣಕ್ಕೆ ತನ್ನ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ. ●

ಬದಲಾವಣೆಯ ದಾರಿ

ಆರ್ಥಿಕ ಸಮೀಕ್ಷೆ : [4]

—ಆರ್. ಚಂದ್ರ

ನಡೆದು ಬಂದ ದಾರಿ :

ಭಾರತದ ಸಮಕಾಲೀನ ಆರ್ಥಿಕ ಅಭಿವೃದ್ಧಿಯು ಹಿಂದುಳಿಯಲು ಇಲ್ಲಿನ ನೈಸರ್ಗಿಕ ಸಂಪತ್ತು ಮತ್ತು ಜನಸಂಪತ್ತು ಹಾಗೂ ಅವರ ಉತ್ಪಾದನಾ ಶಕ್ತಿಗಳಿಗನುಗುಣವಾಗಿ ಉತ್ಪಾದನಾ ಸಂಬಂಧಗಳಿಲ್ಲದಿರುವುದೇ ಮುಖ್ಯ ಕಾರಣವಾಗಿದೆ. ಉತ್ಪಾದನಾ ವಿಧಾನದಲ್ಲಿ ವಿರಸ, ವೈರುಧ್ಯಗಳಿರುವುದೇ ಮುಖ್ಯ ಕಾರಣವಾಗಿದೆ. ಕೃಷಿ ಕೈಗಾರಿಕೆಗಳಲ್ಲಿ ಲಕ್ಷಾಂತರ ಜನರು ಸಾಮೂಹಿಕವಾಗಿ ದುಡಿಯುತ್ತಿದ್ದು, ಉತ್ಪಾದನೆಯು ಸಾಮಾಜಿಕ ಕ್ರಿಯೆ ಆಗಿದೆ. ದುಡಿಯುವ ಜನರೊಳಗಿನ ಸಹಕಾರ ಸೌಹಾರ್ದಗಳಿಂದೊಡಗೂಡಿದೆ. ಆದರೆ, ವ್ಯವಸಾಯ, ವ್ಯಾಪಾರ ವಾಣಿಜ್ಯ ಮತ್ತು ಕೈಗಾರಿಕೋದ್ಯಮಗಳು, ಉತ್ಪಾದನಾ ಸಾಧನ ಸಂಪತ್ತುಗಳು ಇನ್ನೂ ಸಿಂಹಪಾಲು ಖಾಸಗೀ ಒಡೆತನದಲ್ಲಿಯೇ ಇವೆ. ಹೀಗಾಗಿ ದೇಶದ ಆದಾಯ ಸಂಪತ್ತುಗಳು ಭೂಮಾಲಕರ, ಶ್ರೀಮಂತರೈತರ ಮತ್ತು ವ್ಯಾಪಾರಿಗಳ, ಕೈಗಾರಿಕೋದ್ಯಮಿಗಳ ಕೈಯಲ್ಲಿ ಕೇಂದ್ರೀಕೃತವಾಗಿವೆ. ಅವರ ಹಿತಾಸಕ್ತಿಗಳನ್ನು ರಕ್ಷಿಸಲು ರಾಜ್ಯ ಪ್ರಭುತ್ವವೂ ಹಳ್ಳಿಯಿಂದಡಿಲ್ಲಿಯವರೆಗೆ ಹೆಚ್ಚಾಗಿ ಅವರ ಕಪಿಮುಷ್ಟಿಯಲ್ಲಿಯೇ ಇದೆ. ಶೈಕ್ಷಣಿಕ, ಆರೋಗ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ಷೇತ್ರಗಳಲ್ಲೂ ಅವರದ್ದೇ ಮೇಲ್ಗೈ. ಸಾರ್ವಜನಿಕ ಕ್ಷೇತ್ರವೂ ಖಾಸಗೀ ಕ್ಷೇತ್ರಕ್ಕೆ ಪೂರಕವಾಗಿದೆಯೇ ಹೊರತು ಪ್ರತಿಸ್ಪರ್ಧಿಯಾಗಿಲ್ಲ. ಸಹಕಾರಿ ಕ್ಷೇತ್ರದಲ್ಲಿಯೂ ದೊಡ್ಡ ಭೂಮಾಲಕರ, ಶ್ರೀಮಂತ ರೈತರ, ಮತ್ತು ಗುತ್ತೇದಾರಿ ಕೈಗಾರಿಕೋದ್ಯಮಿಗಳ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಪ್ರಭಾವ ಇದೆ.

ಹೀಗಾಗಿ ಉತ್ಪಾದನೆಯು ವಿತರಣೆಯು ನಿಜವಾದ ಉತ್ಪಾದಕರ (ಅವರು ಗ್ರಾಹಕರೂ ಹೌದು) ಶ್ರಮಕ್ಕನುಗುಣವಾಗಿ ನಡೆಯುವುದಿಲ್ಲ. ಬದಲು, ಉತ್ಪಾದನಾ ಸಾಧನ ಸಂಪತ್ತುಗಳ ಖಾಸಗೀ ಒಡೆತನಕ್ಕನುಗುಣವಾಗಿ ವಿತರಣೆಯು ನಡೆಯುವುದು. ಆದುದರಿಂದ, ನಿಜವಾದ ಉತ್ಪಾದಕರು, ಶ್ರಮಿಕ ವರ್ಗದವರು-ಕೃಷಿ ಕಾರ್ಮಿಕರು, ಬಡರೈತರು, ಕೈಗಾರಿಕಾ ಕಾರ್ಮಿಕರು, ನೌಕರರು, ಸಣ್ಣ ಉದ್ಯಮಿಗಳು, ಕೈಕುಶಲ ಕೆಲಸಗಾರರು-ಸಾಮಾಜಿಕ ನ್ಯಾಯದಿಂದ ವಂಚಿತರಾಗುತ್ತಿರುವರು. ಅವರ ಶ್ರಮಕ್ಕೆ ಯೋಗ್ಯ ಕೂಲಿಸಂಬಳ ಸಿಗುತ್ತಿಲ್ಲ. ಅವರ ಉತ್ಪಾದನೆಗೆ ಯೋಗ್ಯ ಬೆಲೆಯೂ ಸಿಗುವುದಿಲ್ಲ. ಹೀಗಾಗಿ, ಅವರ ಉತ್ಪಾದನಾ ಶಕ್ತಿಯು ಕ್ಷಯಿಸುತ್ತಿದೆ, ಗ್ರಾಹಕ ಶಕ್ತಿಯೂ ಕ್ಷಯಿಸುತ್ತಿದೆ. ಅವರ ಉದ್ಯೋಗಾವಕಾಶಗಳೂ ಸ್ಥಗಿತಗೊಳ್ಳುತ್ತಿವೆ. ಉತ್ಪಾದಿತ ಸಾಮಗ್ರಿಗಳಿಗೆ ಆಂತರಿಕ ಮಾರುಕಟ್ಟೆ ಕ್ಷೀಣಿಸಿದಂತೆಲ್ಲಾ, ಬಂಡವಾಳಶಾಹಿಗಳು ಮತ್ತು ಭೂಮಾಲಕರು ತಮ್ಮ ಲಾಭವನ್ನರಸುತ್ತಾ ವಿದೇಶಿ ಮಾರುಕಟ್ಟೆಗೆ ಮೊರೆ ಹೋಗುವರು. ವಿದೇಶಿ ಮಾರುಕಟ್ಟೆಗಳಲ್ಲಿ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳೊಂದಿಗೆ ಸ್ಪರ್ಧಿಸಲು ಅಸಮರ್ಥರಾಗಿ, ತಮ್ಮ ರಾಜ್ಯ ಪ್ರಭುತ್ವದ ವರ್ಚಸ್ಸಿನಿಂದ ತಮ್ಮ ಉತ್ಪಾದನಾ ಚಟುವಟಿಕೆಗಳಿಗೂ ದೇಶವಿದೇಶಗಳಲ್ಲಿನ ವ್ಯಾಪಾರ ವಹಿವಾಟುಗಳಿಗೂ ಸರಕಾರದ ಬೊಕ್ಕಸದಿಂದ ಹೇರಳ ಧನ ಸಹಾಯವನ್ನೂ ತೆರಿಗೆ ವಿನಾಯತಿಯನ್ನೂ ಪಡೆಯುವರು. ಅಸಂಖ್ಯಾತ ನಿರುದ್ಯೋಗಿಗಳಿಂದ ಮತ್ತು ಅರೆ ಉದ್ಯೋಗಿಗಳಿಂದ ಅಗ್ಗದ ಕೂಲಿ ಸಂಬಳದಲ್ಲಿ ಜನರನ್ನು ತಮ್ಮ ಸ್ವಂತ ಲಾಭಕ್ಕಾಗಿ ದುಡಿಸುವರು ಮತ್ತು ಶೋಷಿಸುವರು.

ಸ್ವಾತಂತ್ರ್ಯೋತ್ತರದ ಭಾರತದಲ್ಲಿ ಆರ್ಥಿಕ ಅಭಿವೃದ್ಧಿಗೆ ಆರಿಸಿಕೊಂಡ ಮಾರ್ಗ ಖಾಸಗೀಸ್ವಾಮ್ಯ ಮತ್ತು ಖಾಸಗೀ ಲಾಭಗಳೇ ಮೂಲಭೂತ ಪ್ರೇರಕ ಶಕ್ತಿಗಳಾಗಿರುವ 'ಬಂಡವಾಳ ಶಾಹಿ' ಮಾರ್ಗ. ಆದರೆ, ಬಂಡವಾಳ ಶಾಹಿ ಪದ್ಧತಿಯನ್ನು ಅನುಸರಿಸುವಾಗ ಗ್ರಾಮೀಣ ಪ್ರದೇಶಗಳಲ್ಲಿ ಪಾಳೆಯಗಾರಿ ಹಾಗೂ ಅರೆ ಪಾಳೆಯಗಾರಿ ಪದ್ಧತಿಯ ಪಳೆಯುಳಿಕೆಯನ್ನು ಸಂಪೂರ್ಣ ಕಿತ್ತೊಗೆಯಲಿಲ್ಲ. ಭಾರತ ತಾನೇ ಒಂದು ವಸಾಹತು ದೇಶವಾಗಿದ್ದುದರಿಂದ, ಸ್ವಾತಂತ್ರ್ಯಾನಂತರ ತಾನು ಆರಿಸಿಕೊಂಡ ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯ ವ್ಯವಸ್ಥೆಗನುಗುಣವಾಗಿ ಕಚ್ಚಾ ಸಾಮಗ್ರಿಗಳನ್ನು ಅಗ್ಗದಲ್ಲಿ ಕೊಳ್ಳಲು ಮತ್ತು ಸಿದ್ಧವಸ್ತುಗಳನ್ನು ಲಾಭದಾಯಕವಾಗಿ ಮಾರಲು ವಿಶಾಲ ವಸಾಹತುಗಳನ್ನು ಹೊಂದುವಂತಿಲ್ಲ. ಆರ್ಥಿಕ ಅಭಿವೃದ್ಧಿಗೆ ಭಾರೀ ಪ್ರಮಾಣದಲ್ಲಿ ವಿದೇಶಿ ಬಂಡವಾಳ, ನೆರವು, ತಂತ್ರಜ್ಞಾನ, ಇತ್ಯಾದಿಗಳಿಗೆ ಶರಣು ಹೋಗುವುದು ಅನಿವಾರ್ಯವಾದುದರಿಂದ, ಸಾಮ್ರಾಜ್ಯಶಾಹಿ ರಾಷ್ಟ್ರಗಳು ನಮ್ಮ ಆರ್ಥಿಕ ರಾಜಕೀಯ ಹಾಗೂ ಸಾಂಸ್ಕೃತಿಕ ವಿಷಯಗಳಲ್ಲಿ ಗಣನೀಯವಾಗಿ ಹಸ್ತಕ್ಷೇಪ ಮಾಡಲು ಅವಕಾಶಗಳುಂಟಾಗಿವೆ. ಅವುಗಳ ಆರ್ಥಿಕ ದುಃಸ್ಥಿತಿಯ ದುಷ್ಪರಿಣಾಮಗಳನ್ನು ಭಾರತದಂತಹ ಬಡ ರಾಷ್ಟ್ರಗಳ ಮೇಲೆ ಹೇರಲು ಸಾಧ್ಯವಾಗುತ್ತಿದೆ.

ದುಡಿಯುವ ಜನರು, ವಿದ್ಯಾರ್ಥಿ ಯುವಜನರು, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳಿಗೆ, ನ್ಯಾಯ ಕೂಲಿಸಂಬಳಗಳಿಗೆ, ಸಣ್ಣ ವ್ಯವಸಾಯಗಾರರ ಮತ್ತು ಸಣ್ಣ ಉದ್ಯಮಿಗಳ ಹಾಗೂ ಕೈಕುಶಲ ಕೆಲಸಗಾರರ ಉತ್ಪಾದನೆಗಳಿಗೆ ಯೋಗ್ಯ ಬೆಲೆಗಳಿಗೆ, ಶೈಕ್ಷಣಿಕ, ಆರೋಗ್ಯ ಮುಂತಾದ ಜೀವನಾವಶ್ಯಕತೆಗಳಿಗೆ, ಅರ್ಥಾತ್, ಜೀವನಾಧಾರಕ್ಕೆ, ವಿತರಣಾ ನ್ಯಾಯಕ್ಕೆ, ಸಾಮಾಜಿಕ ನ್ಯಾಯಕ್ಕೆ ಸಂಘಟಿತರಾಗಿ ಹೋರಾಡುತ್ತಿರುವುದನ್ನು ಸ್ವಾತಂತ್ರ್ಯೋತ್ತರದಲ್ಲಿ ಕಾಂಗ್ರೆಸ್ಸು ಮತ್ತು ಇತ್ತೀಚಿಗಿನ ಜನತಾ ನೇತೃತ್ವದ ಬಂಡವಾಳಶಾಹಿ-ಭೂಮಾಲಕ ಪ್ರಭುತ್ವವು ಹತ್ತಿಕ್ಕುತ್ತಲೇ ಬಂದಿವೆ. ಜನರ ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಮುಟ್ಟುಗೋಲು ಹಾಕುತ್ತಲೇ ಬಂದಿವೆ. ಖಾಸಗೀ ಬಂಡವಾಳಗಾರರ ಮತ್ತು ಭೂಮಾಲಕರ ಲಾಭಾದಾಯ ಮತ್ತು ಸಂಪತ್ತುಗಳು ಅವರ ಸುಖಭೋಗಗಳಿಗೂ ಅನುತ್ಪಾದಿತ ವಿಷಯಗಳಿಗೂ ವಿನಿಯೋಗವಾಗುತ್ತಿದ್ದರೆ, ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ತೆರಿಗೆಗಳಿಂದ, ದೇಶವಿದೇಶಗಳ ಸಾಲದಿಂದ, ಕೊರತೆಹಣ ಸೃಷ್ಟಿಯಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಗಳಿಸುವ ಸಂಪನ್ಮೂಲಗಳ ಸಿಂಹಪಾಲು ಆಡಳಿತ, ರಕ್ಷಣೆ, ಪೋಲೀಸು ಖಾತೆಗಳ ವೆಚ್ಚಕ್ಕೂ, ಭೂಮಾಲಕರಿಗೆ ಮತ್ತು ಬಂಡವಾಳಗಾರರಿಗೆ ಸಹಾಯಧನ ನೀಡಲಿಕ್ಕೂ ವಿನಿಯೋಗವಾಗುತ್ತಿದೆ. ದುಡಿಯುವ ಜನರ ಸರ್ವತೋಮುಖವಾದ ಕಲ್ಯಾಣಕಾರ್ಯಗಳು ಮೂಲೆ ಗುಂಪಾಗುತ್ತಿವೆ. ಒಂದೆಡೆ, ಉತ್ಪಾದನೆಯು ಸ್ಥಗಿತಗೊಂಡು ಬೆಲೆಏರಿಕೆ ಹಣದುಬ್ಬರಕ್ಕೆ ಕಾರಣವಾಗುತ್ತಿದೆ. ಇನ್ನೊಂದೆಡೆ, ಜನರ ಗ್ರಾಹಕ ಶಕ್ತಿಯು ಕ್ಷಯಿಸುತ್ತಿದ್ದು, ಉತ್ಪಾದಿತ ವಸ್ತುಗಳಿಗೆ ಮಾರುಕಟ್ಟೆಯಿಲ್ಲದೆ ಆರ್ಥಿಕ ಹಿಂಜರಿತ ಉಂಟಾಗುತ್ತಿದೆ.

ಜನರ ನಿರಂತರ ಹೋರಾಟಗಳಿಂದ, ಸಾಮಾಜಿಕ ನ್ಯಾಯ ಹಾಗೂ ಸಮಾಜವಾದಿ ಕಾರ್ಯಕ್ರಮಗಳು ಜನಪ್ರಿಯವಾಗುತ್ತಿದ್ದು ಆಳುವ ವರ್ಗದವರೂ ತಾವು ಅಧಿಕಾರದಲ್ಲಿ ಮುಂದುವರಿಯಲು ಅವುಗಳನ್ನು ಅನಿವಾರ್ಯವಾಗಿ ಘೋಷಿಸುತ್ತಿದ್ದಾರೆ! ಆದರೆ, 'ಸಮಾಜವಾದಿ ಮಾದರಿ ಸಮಾಜ', ಮಿಶ್ರ ಆರ್ಥಿಕ ನೀತಿ, 'ಕಲ್ಯಾಣ ರಾಜ್ಯ' 'ರಾಮರಾಜ್ಯ', 'ಗರೀಬಿ ಹಟಾವೊ' ಮುಂತಾದ ಘೋಷಣೆಗಳು ಕಳೆದ ಮೂವತ್ತೆರಡು ವರ್ಷಗಳಲ್ಲಿ ತಮ್ಮ ಸತ್ವ ಕಳೆದುಕೊಂಡಿವೆ. ಈ ಘೋಷಣೆಗಳ ಮುಸುಕಿನ ಹಿಂದಿರುವ ಸರ್ವಾಧಿಕಾರ ಹಾಗೂ ಫ್ಯಾಸಿಸ್ಟ್ ಶಕ್ತಿಗಳ ಪರಿಚಯ ಭಾರತದ ಜನಕೋಟಿಗೆ 1975 ರಿಂದ 1977 ರ ವರೆಗಿನ ಇಪ್ಪತ್ತು ತಿಂಗಳ ಅವಧಿಯಲ್ಲಿನ ತುರ್ತು ಪರಿಸ್ಥಿತಿಯ ಅತಿರೇಕಗಳಿಂದ ಸ್ಪಷ್ಟವಾಗಿದೆ. ದುಡಿಯುವ ಜನರಲ್ಲಿ ವರ್ಗ ಪ್ರಜ್ಞೆ ಮತ್ತು ವೈಜ್ಞಾನಿಕ ಸಮಾಜವಾದದ ಕುರಿತಾದ ಪ್ರಜ್ಞೆ ಹೆಚ್ಚುತ್ತಿದೆ. ಅವರ ಪ್ರಜಾಸತ್ತಾತ್ಮಕ ಹೋರಾಟಗಳು ಹರಿತವಾಗುತ್ತಿವೆ. 1977ರ ನಂತರದ ಚುನಾವಣೆಗಳಲ್ಲಿ ಪಶ್ಚಿಮ ಬಂಗಾಳ, ತ್ರಿಪುರ, ಕೇರಳ ಮತ್ತಿತರ ರಾಜ್ಯಗಳಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಜನಪ್ರಿಯತೆಯಿಂದಾಗಿ ದೇಶದ ರಾಜಕೀಯ ಭೂಪಟದಲ್ಲಿ ತೀವ್ರಬದಲಾವಣೆಯಾಗುತ್ತಿದೆ. ಸಮಾಜವಾದಿ ರಾಷ್ಟ್ರಗಳ ಪ್ರಗತಿಯ ಕುರಿತು ಜನರು ಹೆಚ್ಚು ಆಸಕ್ತರಾಗುತ್ತಿದ್ದಾರೆ.

ಬದಲಾವಣೆಯ ದಾರಿ :

ಮೊದಲ ಜಾಗತಿಕ ಯುದ್ಧಾನಂತರ ಪ್ರಪಂಚದಲ್ಲಿ ಒಂದಾದ ಮೇಲೊಂದು ದೇಶದಲ್ಲಿ ಸಮಾಜವಾದಿ ವ್ಯವಸ್ಥೆಯು ಸ್ಥಾಪನೆಗೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ದೇಶಗಳಲ್ಲಿ ಎಲ್ಲಾ ಉತ್ಪಾದನಾ ಸಾಧನ ಸಂಪತ್ತುಗಳನ್ನು ಸಾಮಾಜಿಕ ಒಡೆತನದಲ್ಲಿಡಲಾಯಿತು. ಜನರಿಗೆ ತಮ್ಮ ದುಡಿಮೆಗೂ ಜೀವನಕ್ಕೂ ಸಮಾನ ಆರ್ಥಿಕ ಅವಕಾಶಗಳನ್ನು ನೀಡಲಾಯಿತು. ದುಡಿಯುವ ಹಕ್ಕನ್ನು ಅವರ ಮೂಲಭೂತ ಹಕ್ಕು ಎಂದು ಸಂವಿಧಾನದಲ್ಲಿಯೇ ಗೌರವಿಸಲಾಯಿತು. ಜನರು ಕೆಲಸಕ್ಕಾಗಿ ಖಾಸಗೀ ಸ್ವಾಮ್ಯದವರಲ್ಲಿಗೆ ಬೇಡಲು ಹೋಗಬೇಕಾಗಿಲ್ಲ. ಉತ್ಪಾದನಾ ಸಾಧನ ವಿಧಾನಗಳ ಮೇಲೆ ಖಾಸಗೀ ಸ್ವಾಮ್ಯವನ್ನೇ ನ್ಯಾಯ ಬಾಹಿರ ಮಾಡಲಾಯಿತು. ಜನರ ಶ್ರಮಕ್ಕನುಗುಣವಾಗಿ ಪ್ರತಿಫಲ ದೊರಕುವ ಸುವ್ಯವಸ್ಥೆ ಉಂಟಾಯಿತು. ಅಷ್ಟಲ್ಲದೆ, ಅವರಿಗೆ ಪೌರ ಹಕ್ಕುಗಳನ್ನು, ರಾಜಕೀಯ ಹಕ್ಕುಗಳನ್ನು ಮತ್ತು ಸಾಂಸ್ಕೃತಿಕ ಅವಕಾಶಗಳನ್ನು ವಿಪುಲವಾಗಿ ದೊರಕಿಸಲಾಯಿತು. ಉತ್ಪಾದನೆ, ವಿತರಣೆ, ರಾಜಕೀಯ, ಸಾಂಸ್ಕೃತಿಕ ಮತ್ತಿತರ ಎಲ್ಲಾ ಕ್ಷೇತ್ರಗಳಲ್ಲಿಯೂ ಜನರು ಸಂಘಟಿತರಾಗಿ ದುಡಿಯಲು ಪ್ರೋತ್ಸಾಹ ಮತ್ತು ಸಹಾಯ ಒದಗಿಸಲಾಯಿತು. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಹೊಲ ಕಾರ್ಖಾನೆಗಳಲ್ಲಿ ದುಡಿಯಲು ಮಾತ್ರ ಕೆಲಸಗಾರರು ಸಂಘಟಿತರಾಗುವರು. ಸಮಾಜದ ಇತರ ಕ್ಷೇತ್ರಗಳಲ್ಲಿ ಅವರು ಸಂಘಟಿತರಾಗುವುದು ಬಂಡವಾಳಶಾಹಿಗಳಿಗೆ ಅಗತ್ಯವಿಲ್ಲ. ಕಾರಣ, ಅವರ ಪ್ರಭುತ್ವಕ್ಕೇ ಗಂಡಾಂತರಉಂಟಾಗುವುದು ಎಂಬ ಭಯ. ಸಮಾಜವಾದಿ ಸಮಾಜಗಳಲ್ಲಿ, ಆಸ್ತಿವಂತರ ಉತ್ಪಾದನಾ ಶಕ್ತಿಗಳನ್ನು ಲಾಭದಾಸೆಯಿಂದ ಪ್ರಚೋದಿಸುವುದನ್ನು ಬಿಟ್ಟು ದುಡಿಯುವ ಮತ್ತು ಜೀವನದ ಅವಕಾಶಗಳನ್ನು ಸಮಸ್ತ ಜನರಿಗೂ ಒದಗಿಸಿ ಅವರೆಲ್ಲರ ಉತ್ಪಾದನಾ ಶಕ್ತಿಗಳನ್ನು ಫಲಪ್ರದವಾಗಿ ಅರಳಿಸಲಾಗುವುದು. ಅವುಗಳು ಸಮಕಾಲೀನ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಸರಿಹೊಂದುವಂತೆ ಅಭಿವೃದ್ಧಿಯಾಗುವುವು. ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಳಕೆಯಿಂದ ಜನರು ನಿರುದ್ಯೋಗಿಗಳಾಗುವರು ಎಂಬ ಭಯ ಇಂತಹ ಸಮಾಜಗಳಲ್ಲಿಲ್ಲ, ಬದಲು ಅವರ ಜೀವನ ಮಟ್ಟ ಉತ್ತಮಗೊಳ್ಳುವುದು. ದಿನದ ದುಡಿಯುವ ಅವಧಿಯು ಕಡಿಮೆಯಾಗಿ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವರಿಗೆ ಅವಕಾಶಗಳು ಹೆಚ್ಚುವುವು.

ಹೀಗಾಗಿ, ಸಮಾಜವಾದಿ ರಾಷ್ಟ್ರಗಳಲ್ಲಿ ನೆರೆ, ಬರಗಾಲ, ಜನಸಂಖ್ಯೆ ಹೆಚ್ಚಳ, ಯುದ್ಧ, ಬಂಡವಾಳಶಾಹಿ ರಾಷ್ಟ್ರಗಳು ಹಾಕಿರುವ ಆರ್ಥಿಕ ದಿಗ್ಬಂಧನ ಇವೆಲ್ಲವುಗಳಿದ್ದರೂ, ಅಲ್ಲಿಯ ಜನರು ಹಸಿವಿನಿಂದ ಸಾಯುವುದಿಲ್ಲ. ನಿರಕ್ಷರಸ್ಥರಾಗಿಲ್ಲ, ಅಪರಾಧಗಳಿಗಿಳಿಯುವುದಿಲ್ಲ, ಮಕ್ಕಳು ಮಹಿಳೆಯರು ಕೂಲಿಗಾಗಿ ಮೈಮಾರಿಕೊಳ್ಳಬೇಕಾಗಿಲ್ಲ, ವೃದ್ಧರು ನಿರ್ಲಕ್ಷಿಸಲ್ಪಡುವುದಿಲ್ಲ, ವಿದ್ಯಾರ್ಥಿ ಯುವಜನರ ಶಕ್ತಿ ವ್ಯರ್ಥವಾಗುವುದಿಲ್ಲ. ಅಲ್ಲಿ ನಿರುದ್ಯೋಗ, ಬೆಲೆ ಏರಿಕೆ, ಹಣದುಬ್ಬರ, ಆರ್ಥಿಕ ಹಿಂಜರಿತ, ಶಕ್ತಿ ಅಭಾವ, ಮಾರುಕಟ್ಟೆಗಳ ಸಮಸ್ಯೆ, ಹಣ ಮತ್ತು ವಿದೇಶಿ ವಿನಿಮಯಗಳ ಏರಿಳಿತ, ಕೈಗಾರಿಕಾ ಅಶಾಂತಿ, ಇತ್ಯಾದಿ ಸಮಸ್ಯೆಗಳಿಲ್ಲ. ಈ ಸತ್ಯ ವಿಷಯಗಳನ್ನು ವಿಶ್ವಸಂಸ್ಥೆಯ ಮತ್ತು ಅದರ ಉಪ ಸಂಸ್ಥೆಗಳ ಹಲವಾರು ವರದಿಗಳಲ್ಲಿ ಸವಿವರವಾಗಿ ಕೊಡಲಾಗಿದೆ. ಇವು 50 ವರುಷದ ಅವಧಿಯಲ್ಲಿ ಪ್ರಗತಿ ಹೊಂದಿದ ಸೋವಿಯತ್ ಯೂನಿಯನ್‌ಗೆ ಮಾತ್ರ ಸೀಮಿತವಾಗಿರದೆ, ಎರಡನೇ ಜಾಗತಿಕ ಯುದ್ಧಾನಂತರ ಸ್ವಾತಂತ್ರ್ಯಗೊಂಡ ಯುರೋಪಿನ ಸಮಾಜವಾದಿ ರಾಷ್ಟ್ರಗಳಿಗೂ ಜನತಾ ಚೀನಾ, ವಿಯೆಟ್ನಾಂ, ಉತ್ತರಕೊರಿಯ, ಕ್ಯೂಬಾ ಸಮಾಜವಾದಿ ರಾಷ್ಟ್ರಗಳಿಗೂ ಅನ್ವಯಿಸುತ್ತವೆ. ಆದರೆ, ಅದೇ ವರದಿಗಳು ಸಂಯುಕ್ತ ಅಮೆರಿಕಾ ಸಂಸ್ಥಾನ, ಪ. ಯುರೋಪಿನ ರಾಷ್ಟ್ರಗಳು, ಜಪಾನ್, ಕೆನಡಾ, ಆಸ್ಟ್ರೇಲಿಯ ಮುಂತಾದ ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ಮತ್ತು ಭಾರತವೂ ಸೇರಿದಂತೆ ಏಷ್ಯಾ, ಆಫ್ರಿಕಾ, ಉ. ಅಮೆರಿಕಾದ ಅಭಿವೃದ್ಧಿ ಹೊಂದುತ್ತಿರುವ ಸಮಾಜವಾದಿಯೇತರ ದೇಶಗಳಲ್ಲಿಯೂ ತೀವ್ರ ಆರ್ಥಿಕ ದುಃಸ್ಥಿತಿಗಳ ವಿವರಗಳನ್ನು ತಿಳಿಸಿವೆ. ಸಮಾಜವಾದಿ ದೇಶಗಳಲ್ಲಿ ಸಮಸ್ಯೆಗಳೇ ಇಲ್ಲ ಎಂದಲ್ಲ. ಮಾನವ ನಿಯಂತ್ರಣಕ್ಕೆ ಮೀರಿದ ನೈಸರ್ಗಿಕ, ಆರ್ಥಿಕ ಸಮಸ್ಯೆಗಳು ಅಲ್ಲಿಯೂ ಇವೆ. ಆದರೆ, ಅವುಗಳ ದುಷ್ಪರಿಣಾಮಗಳನ್ನು ಎಲ್ಲರೂ ಒಗ್ಗಟ್ಟಿನಿಂದ ಎದುರಿಸುವರು. ಸಾಮಾಜಿಕ ಅಭಿವೃದ್ಧಿಯು ಯೋಜನಾಬದ್ಧವಾಗಿ ನಡೆಯುವುದು. ಮಾನವ ಮಾನವನನ್ನು ಶೋಷಿಸುವುದಿಲ್ಲ. ಬದಲು, ದೇಶಬಾಂಧವರೆಲ್ಲರೂ ಒಗ್ಗಟ್ಟಿನಿಂದ, ಸಹಕಾರ ಸೌಹಾರ್ದಗಳಿಂದ ನಿಸರ್ಗ ಸಂಪತ್ತನ್ನು ತಮ್ಮ ಜೀವನದ ಸಂಪತ್ ಸಮೃದ್ಧಿಗಾಗಿ ಬಳಸಿಕೊಳ್ಳಲು ಹೋರಾಡುವರು. ವರ್ಗ ಹೋರಾಟವು ನಿಂತು ನಿಸರ್ಗದೊಡನೆ ಹೋರಾ

ಟವು ಹರಿತವಾಗುವುದು. ಆಗ ಪ್ರಾಚೀನ ಸಾಮುದಾಯಿಕ ಸಮಾಜದ ಮಾನವೀಯತೆಯೂ ಆಧುನಿಕ ಬಂಡವಾಳಶಾಹಿ ಸಮಾಜದ ವಿಜ್ಞಾನ ತಂತ್ರಜ್ಞಾನವೂ ಸಮಾಜವಾದಿ ರಾಷ್ಟ್ರಗಳಲ್ಲಿ ಬೇರೂರುವುದು.

ಭಾರತದಲ್ಲಿಯೂ ದುಡಿಯುವ ಜನರ ಪ್ರಜಾಸತ್ತಾತ್ಮಕ ಹೋರಾಟವು ಪಾಳೆಯಗಾರಿ ಹಾಗೂ ಅರೆ ಪಾಳೆಯಗಾರಿ ಪಳೆಯುಳಿಕೆಗಳನ್ನು ಕಿತ್ತೊಗೆಯಲು, ವಿದೇಶಿ ಬಂಡವಾಳಶಾಹಿಗಳಿಂದ, ಸಾಮ್ರಾಜ್ಯಶಾಹಿಗಳಿಂದ ಸ್ವತಂತ್ರವಾಗಲು, ಸ್ವಾವಲಂಬಿಯಾಗಲು, ಗುತ್ತೇದಾರಿ ಬಂಡವಾಳಶಾಹಿಗಳಿಂದ ಮುಕ್ತವಾಗಲು, ಅರ್ಥಾತ್ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯು ಸಫಲವಾಗಲು ಮತ್ತು ಮುಂದೆ ವೈಜ್ಞಾನಿಕ ಸಮಾಜವಾದದ ಗುರಿ ಸೇರಲು ಈ ಕೆಳಗಿನ ಮೂಲಭೂತ ಬದಲಾವಣೆಯ ದಾರಿಯನ್ನು ಅನುಸರಿಸಬೇಕಾಗುವುದು. ಜನರ ಉತ್ಪಾದನಾ ಸಂಬಂಧಗಳಲ್ಲಿ ತೀವ್ರ ಬದಲಾವಣೆಯಾಗಲು ಜನರ ಪ್ರಜಾಸತ್ತಾತ್ಮಕ ಹೋರಾಟಹರಿತವಾಗಬೇಕಾಗುವುದು.

1. ಉತ್ಪಾದನೆ :

ಎಲ್ಲಾ ಉತ್ಪಾದನಾ ಸಾಧನ ಸಂಪತ್ತುಗಳನ್ನು ಸಾಮಾಜಿಕ ಸ್ವಾಮ್ಯಕ್ಕೆ ತರಬೇಕು. ಪ್ರಾರಂಭದಲ್ಲಿ, ಎಲ್ಲಾ ಖಾಸಗೀ ವಿದೇಶಿ ವ್ಯಾಪಾರ ಮತ್ತು ಕೈಗಾರಿಕಾ ಸಂಸ್ಥೆಗಳನ್ನು, ಬಹುರಾಷ್ಟ್ರೀಯ ಸಂಸ್ಥೆಗಳ ಅಂಗಸಂಸ್ಥೆಗಳನ್ನು ಪರಿಹಾರವಿಲ್ಲದೆ ಅಥವಾ ಸಾಂಕೇತಿಕ ಪರಿಹಾರವಿತ್ತು ರಾಷ್ಟ್ರೀಕರಿಸಬೇಕು. ಆರ್ಥಿಕ ಪ್ರಗತಿಗೆ ಭದ್ರ ತಳಪಾಯವನ್ನು ಒದಗಿಸುವ ಎಲ್ಲಾ ಘನ ಉದ್ಯಮಗಳನ್ನು ಸಾರ್ವಜನಿಕ ಕ್ಷೇತ್ರಕ್ಕೆ ಸೇರಿಸಬೇಕು. ಏಕಸ್ವಾಮ್ಯ ಕುಟುಂಬಗಳಿಗೆ ಸೇರಿದ ಎಲ್ಲಾ ದೊಡ್ಡ ಉದ್ಯಮಗಳನ್ನು ಮತ್ತು ಲ್ಯಾಸನ್ಸ್ ನಿಯಂತ್ರಣಕ್ಕೆ ಒಳಪಟ್ಟ ಬೃಹತ್ ಸ್ವತಂತ್ರ ಕೈಗಾರಿಕಾ ಕಂಪೆನಿಗಳನ್ನು ರಾಷ್ಟ್ರೀಕರಿಸಬೇಕು. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೂ ಕೈಕಸಬುಗಳಿಗೂ ಪ್ರೋತ್ಸಾಹ ನೀಡಬೇಕು. ಸಣ್ಣ ಉತ್ಪಾದಕರನ್ನು ಸಹಕಾರಿ ಕ್ಷೇತ್ರದಲ್ಲಿ ಸಂಘಟಿಸಬೇಕು. ಸುಖಭೋಗಗಳ ಸಾಮಗ್ರಿಗಳ ಉತ್ಪಾದನೆಯನ್ನು ನಿಶೇಧಿಸಬೇಕು. ಅವುಗಳ ಉತ್ಪಾದನಾ ಸಾಮರ್ಥ್ಯವನ್ನು ಜನಸಾಮಾನ್ಯರ ಬಳಕೆಗೆ ಅಗತ್ಯವಾದ ಸಾಮಗ್ರಿಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಲು ಉಪಯೋಗಿಸಬೇಕು. ಬಂಡವಾಳ ಮೂಲವಾದ ಘನ ಉದ್ಯಮಗಳಲ್ಲಿ ಮತ್ತು ಶ್ರಮಶಕ್ತಿ ಮೂಲವಾದ ಜೀವನಾವಶ್ಯಕ ವಸ್ತುಗಳ ಉತ್ಪಾದನೆಯ ಉದ್ಯಮಗಳಲ್ಲಿ ಸ್ವದೇಶಿ ತಂತ್ರಜ್ಞಾನವನ್ನು ಬಳಸುವಂತೆ ನಮ್ಮ ರಾಷ್ಟ್ರೀಯ ವೈಜ್ಞಾನಿಕ, ತಾಂತ್ರಿಕ, ಆಡಳಿತ ವಿಶೇಷ ಸಂಸ್ಥೆಗಳು ಶ್ರಮಿಸಬೇಕು. ಎಲ್ಲಾ ವಿದೇಶಿ ವೈಜ್ಞಾನಿಕ ತಾಂತ್ರಿಕ ಒಪ್ಪಂದಗಳನ್ನು ಪುನರ್ವಿಮರ್ಶಿಸಬೇಕು.

ಕೃಷಿಕ್ಷೇತ್ರದಲ್ಲಿ, ಭೂಮಾಲಕ ಪದ್ಧತಿಯನ್ನು ತೊಡೆದು ಹಾಕಬೇಕು. ಅಳಿದುಳಿದ ಪಾಳೆಯಗಾರಿ ಹಾಗೂ ಅರೆ ಪಾಳೆಯಗಾರಿ ಭೂಸಂಬಂಧವನ್ನು ನಿವಾರಿಸಬೇಕು. ಉಳುವವರಿಗೆ ಹೊಲವನ್ನು ಭೂಮಾಲಕರಿಂದ ಪಡೆದು ಮರುವಿತರಣೆ ಮಾಡಬೇಕು. ಒಕ್ಕಲುಗಳಿಗೆ ಪಾಲುಬೆಳೆಗಾರರಿಗೆ ಆಸ್ತಿ ಹಕ್ಕನ್ನು ನೀಡಬೇಕು. ಒಕ್ಕಲು ದುಡಿಸುವುದನ್ನು ಶಾಸನದ ಮೂಲಕ ನಿಶೇಧಿಸಬೇಕು; ತಪ್ಪಿತಸ್ಥರನ್ನು ಶಿಕ್ಷಿಸಬೇಕು. ಪುನರ್ ವಿತರಣೆಮಾಡಿದ ಭೂಹಿಡುವಳಿಗಳ ಮೇಲಿನ ಹಕ್ಕುಗಳ ದಾಖಲೆಯನ್ನು ದೃಢಪಡಿಸಬೇಕು. ಜನತಾ ಸಮಿತಿಗಳ ಮೂಲಕ ಒಕ್ಕಲುಗಳ ಮತ್ತು ಪಾಲುಬೆಳೆಗಾರರ ಹಕ್ಕು ಭಾದ್ಯತೆಗಳನ್ನು ಪ್ರಚಲಿತ ಶಾಸನಗಳನ್ವಯ ಕಾಪಾಡಬೇಕು. ಭೂಮಿತಿ ಶಾಸನಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಬೇಕು. ಹೆಚ್ಚುವರಿ ಭೂಮಿಯನ್ನು ಸರಕಾರ ಸ್ವಾಧೀನಪಡಿಸಿ ಭೂಹೀನ ಕೃಷಿಕಾರ್ಮಿಕರಿಗೂ ಬಡರೈತರಿಗೂ ಕೊಡಬೇಕು. ಹಾಗೆಯೇ ವ್ಯವಸಾಯ ಯೋಗ್ಯವಾದ ಬಂಜರು ಭೂಮಿಯನ್ನು ಅವರಿಗೆ ವಿತರಣೆ ಮಾಡಬೇಕು. ಬಡ ಮತ್ತು ಮಧ್ಯಮ ವರ್ಗದ ರೈತರನ್ನು ಹಾಗೂ ಕೃಷಿಕಾರ್ಮಿಕರನ್ನು ಸಹಕಾರ ಸಂಘಗಳಲ್ಲಿ ಸಂಘಟನೆಗೊಳ್ಳುವಂತೆ ಪ್ರೋತ್ಸಾಹಿಸಬೇಕು, ಸಹಕರಿಸಬೇಕು. ಅವರಿಗೆ ಸಾಲ, ಬೀಜ, ನೀರು, ಗೊಬ್ಬರ, ವ್ಯವಸಾಯ ಸಲಕರಣೆ, ಇತ್ಯಾದಿ ಸಹಾಯಗಳನ್ನೂ ಮುಕ್ತ ಸಲಹೆಗಳನ್ನೂ ಅಗ್ಗದಲ್ಲಿ ಸಾಕಷ್ಟು ಒದಗಿಸಿಕೊಡಬೇಕು. ಈಗ ಶ್ರೀಮಂತ ರೈತರಿಗೂ ದೊಡ್ಡ ಕೈಗಾರಿಕೋದ್ಯಮಿಗಳಿಗೂ ರಫ್ತು ವ್ಯಾಪಾರಿಗಳಿಗೂ ಸರಕಾರವು ಸಹಾಯ ಧನ ನೀಡುವುದನ್ನು ಬಿಟ್ಟು, ಸಣ್ಣ ಹಾಗೂ ಮಧ್ಯಮ ವರ್ಗದ ವ್ಯವಸಾಯಗಾರರಿಗೂ ಕೈಗಾರಿಕೋದ್ಯಮಿಗಳಿಗೂ ಅವರ ಉತ್ಪಾದನೆಯು ಲಾಭದಾಯಕವಾಗುವಂತೆ ಸಹಾಯಧನ ನೀಡಬೇಕು. ಬೆಲೆಗಳ ಧೋರಣೆಯಲ್ಲಿ ಮಹತ್ವದ ಬದಲಾವಣೆ ಮಾಡಬೇಕು. ಫಸಲಿಗೆ ನೀಡುವ ಯೋಗ್ಯ ಪ್ರೋತ್ಸಾಹ ಬೆಲೆಯ ಪ್ರತಿಫಲವು - ಬಡ ಹಾಗೂ ಮಧ್ಯಮ ವರ್ಗದ ರೈತರಿಗೆ ಸೇರುವಂತಾಗಬೇಕು. ಆಗಲೇ, ಸಂಪತ್ತಿನ ಮರು ವಿತರಣೆಯೊಂದಿಗೆ ಆದಾಯದ ಮರು ವಿತರಣೆಯೂ ಸಾಧ್ಯವಾದೀತು. ಸಾರ್ವಜನಿಕ ಕೆಲಸಕಾರ್ಯಗಳಲ್ಲಿ ಸರಕಾರವು ವಿನಿಯೋಗಿಸುವಾಗ ಹೆಚ್ಚಾಗಿ ಬಡ ಹಾಗೂ ಮಧ್ಯಮವರ್ಗದ ರೈತರಿಗೆ ಉಪಯೋಗವಾಗುವಂತೆ ಆಸಕ್ತಿವಹಿಸಬೇಕು.

2. ವಿತರಣೆ :

ಜೀವನಾವಶ್ಯಕ ವಸ್ತುಗಳನ್ನು ದೇಶಾದ್ಯಂತ ವ್ಯಾಪಾರಿ ಮಧ್ಯಮ ಜನರಿಲ್ಲದೇನೇ ಸಾರ್ವಜನಿಕ ವಿತರಣೆಯ ಮೂಲಕ, ಸಹಕಾರ ಸಂಘಗಳ ಮೂಲಕ ಏರ್ಪಡಿಸಬೇಕು. ಶ್ರೀಮಂತ ರೈತರಿಂದ ಮತ್ತು ದೊಡ್ಡ ಭೂಮಾಲಕರಿಂದ ಮಾರುಕಟ್ಟೆಗೆ ಮೀಸಲಾಗಿರುವ ಹೆಚ್ಚುವರಿ ದವಸ ಧಾನ್ಯಗಳನ್ನು ಸರಕಾರವು ಹೆಚ್ಚು ಕಡಿಮೆ ದೇಶಾದ್ಯಂತ ಸಮುದರಗಳಲ್ಲಿ ಸಂಪೂರ್ಣವಾಗಿ ವಶಪಡಿಸಿಕೊಳ್ಳಬೇಕು. ಆಹಾರಧಾನ್ಯಗಳಲ್ಲಿ ಹಾಗೂ ಅಗತ್ಯ ವಸ್ತುಗಳಲ್ಲಿ ಸರಕಾರವೇ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಬೇಕು. ಪ್ರತಿಹಳ್ಳಿ ಮತ್ತು ತಾಲೋಕುಗಳಿಗೆ ಅಗತ್ಯವಿರುವಷ್ಟು ಆಹಾರಧಾನ್ಯಗಳನ್ನು ಅಲ್ಲಿನ ಪಂಚಾಯತುಗಳ ವಶದಲ್ಲಿ ಬಿಟ್ಟುಬಿಟ್ಟು ಹೆಚ್ಚುವರಿ ಧಾನ್ಯವನ್ನು ಸರಕಾರ ವಹಿಸಿಕೊಂಡು ಪೇಟೆಪಟ್ಟಣಗಳಲ್ಲಿ ಪಡಿತರ ಪದ್ಧತಿಯ ಮೂಲಕ ತೃಪ್ತಿಕರವಾಗಿ ನ್ಯಾಯ ಬೆಲೆಗಳಲ್ಲಿ ಹಂಚಬೇಕು. ಆಹಾರಧಾನ್ಯಗಳ ಹಾಗೂ ಅಗತ್ಯ ವಸ್ತುಗಳ ಬೆಲೆಗಳ ಏರಿಳಿತ ತಡೆಯಲು ಸರಕಾರವು ದೇಶಾದ್ಯಂತ ಇವುಗಳನ್ನು ದಾಸ್ತಾನು ಇಡಬೇಕು.

ಪ್ರತಿಯೊಬ್ಬ ಉದ್ಯೋಗ ಬಯಸುವವನಿಗೆ ಉದ್ಯೋಗ ಕೊಡಬೇಕು; ಇಲ್ಲವೇ ನಿರುದ್ಯೋಗ ಭತ್ತೆಯನ್ನು ನೀಡಬೇಕು. ಉದ್ಯೋಗ ಪಡೆಯುವ ಹಕ್ಕನ್ನು ಮೂಲಭೂತ ಹಕ್ಕು ಎಂದು ಸಂವಿಧಾನದಲ್ಲಿ ಗೌರವಿಸಬೇಕು. 'ಧಾನ್ಯಕ್ಕಾಗಿ-ಕೆಲಸ' ಕಾರ್ಯಕ್ರಮಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಆಹಾರಧಾನ್ಯಗಳನ್ನು ಸರಕಾರದ ಸಂಗ್ರಹಣೆಯಿಂದ ನೀಡಬೇಕು. ವ್ಯವಸಾಯೇತರ ಅವಧಿಯಲ್ಲಿ ಗ್ರಾಮೀಣ ಬಡಜನರು ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಬರುವುದನ್ನು ಈ ಕಾರ್ಯಕ್ರಮಗಳಿಂದ ಪರಿಣಾಮಕಾರಿಯಾಗಿ ತಡೆಯಬೇಕು. ಕೃಷಿ ಕೆಲಸಗಾರರಿಗೆ ಮತ್ತು ಕೈಗಾರಿಕಾ ಕೆಲಸಗಾರರಿಗೆ ಹಾಗೂ ನೌಕರರಿಗೆ ಕನಿಷ್ಟ ವೇತನವನ್ನು ನಿಶ್ಚೈಸಿ, ಮುಂದೆ ಸತತವಾಗಿ ಅವರ ಜೀವನ ಮಟ್ಟವು ಹೆಚ್ಚುವಂತೆ ವೇತನ ಮಟ್ಟವನ್ನೂ ಹೆಚ್ಚಿಸಬೇಕು. ರಾಷ್ಟ್ರೀಯ ಮಟ್ಟದಲ್ಲಿ ಆದಾಯದ ಅಂತರವನ್ನು ನಿರ್ಧರಿಸಬೇಕು ಮತ್ತು ಗಣನೀಯವಾಗಿ ಅದನ್ನು ಕಡಿಮೆ ಮಾಡಬೇಕು. 'ಸಮಾನ ಕೆಲಸಕ್ಕೆ ಸಮಾನ ವೇತನ' ತತ್ವವನ್ನು ದೇಶಾದ್ಯಂತ ಕಟ್ಟುನಿಟ್ಟಿನಿಂದ ಪಾಲಿಸಬೇಕು. ಜೀವನದ ಎಲ್ಲಾ ಕ್ಷೇತ್ರಗಳಿಗೂ ಗಂಡು-ಹೆಣ್ಣು ಎಂಬ ಬೇಧವಿಲ್ಲದೆ ಸಮಾನ, ಅವಕಾಶಗಳಿರಬೇಕು. ದುಡಿಯುವ ಮಹಿಳೆಯರಿಗೆ ಎಲ್ಲಾ ವಿಧದ ಸೌಕರ್ಯಗಳನ್ನು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ನಿರ್ಣಯದಂತೆ ಒದಗಿಸಿಕೊಡಬೇಕು. ಮಕ್ಕಳ ಲಾಲನೆ ಪಾಲನೆಗೆ ಮತ್ತು ಅವರ ಶಿಕ್ಷಣ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಮಕ್ಕಳ ಅಂತರರಾಷ್ಟ್ರೀಯ ಬೇಡಿಕೆಗಳನ್ನು ಈಡೇರಿಸಬೇಕು. ವೇತನ ಕಡಿತ, ವೇತನ ಸ್ತಂಭನ ಅಥವಾ ವೇತನ ಕೊಡುವಿಕೆಯನ್ನು ಮುಂದೂಡುವುದು ಮುಂತಾದ ಧೋರಣೆಗಳನ್ನು ಕೈಬಿಡಬೇಕು. ಜೀವನಾವಶ್ಯಕ ವೇತನ ದೊರೆಯುವವರೆಗೂ ವಾರ್ಷಿಕ ಬೋನಸ್ಸನ್ನು 'ಮುಂದೂಡಿದ ವೇತನ' ವೆಂದು ಕಡ್ಡಾಯವಾಗಿ, ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರದ ಎಲ್ಲಾ ಕಾರ್ಮಿಕರಿಗೂ, ಸರಕಾರಿ ನೌಕರರಿಗೂ ನೀಡಬೇಕು. ಕ್ಷೇಮನಿಧಿ, ಜೀವವಿಮೆ, ಆರೋಗ್ಯ ಮುಂತಾದ ಸಾಮಾಜಿಕ ಭದ್ರತೆಗಳನ್ನು ಕೃಷಿ ಕಾರ್ಮಿಕರನ್ನೂ ಬಡರೈತರನ್ನೂ ಸೇರಿ ಎಲ್ಲಾ ದುಡಿಯುವವರಿಗೆ ನೀಡಬೇಕು.

3. ಸಂಪನ್ಮೂಲಗಳ ಸಂಗ್ರಹಣೆ :

ಸಾಮ್ರಾಜ್ಯಶಾಹಿ ದೇಶಗಳನೊಡನಿರುವ ವಿದೇಶಿ ಸಾಲಗಳನ್ನು ನಿರಾಕರಿಸಬೇಕು. ಕೃಷಿ ಕೆಲಸಗಾರರ, ಬಡ ರೈತರ ಮತ್ತು ಮಧ್ಯಮರೈತರ, ಭೂಹೀನರ ಸಾಲದ ಹೊರೆಯನ್ನು ಸಂಪೂರ್ಣವಾಗಿ ಇಳಿಸಬೇಕು. ನಗರಗಳಲ್ಲಿನ ಆಸ್ತಿ ಆದಾಯಗಳ ಮೇಲೆ ಮಿತಿ ಹೇರಬೇಕು. ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳ ಲಾಭಗಳ ಮೇಲೆ ಮಿತಿ ಹೇರಬೇಕು. ಹೆಚ್ಚುವರಿ ಲಾಭವನ್ನು ಸರಕಾರವು ವಶಪಡಿಸಿಕೊಳ್ಳಬೇಕು. ಮೇಲ್ಮಟ್ಟದ ಆದಾಯ, ಸಂಪತ್ತು, ಭೂಮಿ ಮತ್ತು ಇತರ ಆಸ್ತಿಗಳಲ್ಲಿ ಏರುತ್ತಿರುವ ಮೌಲ್ಯಗಳ ಮೇಲೆ ಕ್ರಮವಾಗಿ ಏರಿಕೆ ದರದಲ್ಲಿ ತೆರಿಗೆ ವಿಧಿಸಬೇಕು. ಕೃಷಿ ಆದಾಯದ ಮೇಲೆ ಮತ್ತು ದೊಡ್ಡ ಹಿಡುವಳಿಯ ಆಧಾರದ ಮೇಲೆ ಏರಿಕೆಯ ದರದಲ್ಲಿ ತೆರಿಗೆ ವಿಧಿಸಬೇಕು. ಸುಖ ಭೋಗದ ವಸ್ತುಗಳ ಮೇಲೆ ಅತ್ಯಧಿಕ ತೆರಿಗೆಯನ್ನು ಹೇರಬೇಕು. ಜೀವನಾವಶ್ಯಕ ವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆಗಳನ್ನು ಸಂಪೂರ್ಣವಾಗಿ ವಿನಾಯತಿಗೊಳಿಸಬೇಕು. ಅಗತ್ಯವಿರುವಲ್ಲಿ ಅಂತಹ ವಸ್ತುಗಳನ್ನು ದುರ್ಬಲ ವರ್ಗದ ಜನರಿಗೆ ನಿಶ್ಚಿತ ಬೆಲೆಗಿಂತಲೂ ಕಡಿಮೆ ದರದಲ್ಲಿ ಒದಗಿಸಿಕೊಡಬೇಕು.

ಕೊರತೆ ಹಣ ಸೃಷ್ಟಿಯ ಪದ್ಧತಿಯನ್ನು ಸಂಪೂರ್ಣವಾಗಿ ಕೈಬಿಡಬೇಕು. ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಜನರ ಉಳಿತಾಯದಿಂದಲೇ ಪಡೆಯಬೇಕು. ಕಪ್ಪು ಹಣಕ್ಕೆ ಮುಟ್ಟುಗೋಲು ಹಾಕಬೇಕು. ಅದನ್ನು ಪತ್ತೆ ಹಚ್ಚಿ ಸರಕಾರದ ವಶಪಡಿಸಿಕೊಳ್ಳಬೇಕು. ಚಿನ್ನ ಬೆಳ್ಳಿ ಮುಂತಾದ ಅಮೂಲ್ಯ ಲೋಹಗಳನ್ನು ಕಪ್ಪುಹಣದೊಡೆಯರ ಆಸ್ತಿಗಳನ್ನು, ಕಳ್ಳಸಾಗಾಣಿಕೆದಾರರ ಆಸ್ತಿ-ಆದಾಯಗಳನ್ನು ಬಲಾತ್ಕಾರವಾಗಿ ವಶಪಡಿಸಿಕೊಳ್ಳಬೇಕು. ಅವರನ್ನು ಕಠಿಣ ಶಿಕ್ಷೆಗಳಿಗೆ ಗುರಿಪಡಿಸಬೇಕು. ಹತ್ತು ರೂಪಾಯಿಗಿಂತ ಹೆಚ್ಚಿನ ನೋಟುಗಳನ್ನು ಅನಾಣ್ಯಗೊಳಿಸಬೇಕು. ಈ ಕ್ರಮ ಕೈಕೊಳ್ಳುವಾಗ ಎಲ್ಲಾ ಜಾಗರೂಕತೆಯನ್ನು ವಹಿಸಬೇಕು. ಕುಂದುಕೊರತೆಗಳನ್ನು ಪರಿಣಾಮಕಾರಿಯಾಗಿ ನೀಗಿಸಬೇಕು. ವ್ಯಾಪಾರಸ್ಥರ, ಕೈಗಾರಿಕೋದ್ಯಮಿಗಳ, ಶ್ರೀಮಂತ ರೈತರ, ಭೂಮಾಲಕರ ಮತ್ತು ಅವರ ರಾಜಕಾರಣಿಗಳ ಬ್ಯಾಂಕು ಖಾತೆಗಳ ಮೇಲೆ ಕಟ್ಟುನಿಟ್ಟಿನ ಕಣ್ಣಿಡಬೇಕು. ಅನುತ್ಪಾದಿತ ವಿಷಯಗಳಿಗೆ ಅವರು ವಿನಿಯೋಗಿಸುವುದನ್ನು ತಡೆಯಲು, ಅವರ ವೆಚ್ಚಗಳ ಮೇಲೂ ಕರ ಹೇರಬೇಕು. ಅವರೆಲ್ಲರೂ ತಮ್ಮ ವ್ಯವಹಾರಗಳನ್ನು ಬ್ಯಾಂಕುಗಳ ಮೂಲಕವೇ ನಡೆಸುವಂತೆ ನಿರ್ದೇಶಿಸಬೇಕು. ರಕ್ಷಣೆ, ಪೋಲೀಸು ಮತ್ತು ಆಡಳಿತ ವೆಚ್ಚಗಳನ್ನು ತೀವ್ರ ಕಡಿಮೆ ಮಾಡಬೇಕು. ಶಿಕ್ಷಣ, ಆರೋಗ್ಯ, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಯ ವಿಷಯಗಳಿಗೆ ಸಂಪನ್ಮೂಲಗಳನ್ನು ಹೆಚ್ಚುಹೆಚ್ಚಾಗಿ ವಿನಿಯೋಗಿಸಬೇಕು. ರಾಜ್ಯ ಸರಕಾರಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಪಡೆಯಲು ಸ್ವಾಯತ್ತತೆ ಇರಬೇಕು. ಕೇಂದ್ರ ಸರಕಾರವು ಸಂಗ್ರಹಿಸುವ ಎಲ್ಲಾ ವಿಧದ ಸಂಪನ್ಮೂಲಗಳಲ್ಲಿ ಸಿಂಹಪಾಲು ರಾಜ್ಯ ಸರಕಾರಗಳಿಗೇ ಒದಗಿಸಬೇಕು.

4. ಪ್ರಜಾಪ್ರಭುತ್ವದ ರಕ್ಷಣೆ :

ತುರ್ತುಪರಿಸ್ಥಿತಿಯಲ್ಲಿ ಸಂವಿಧಾನಕ್ಕೆ ಮಾಡಿದ 42ನೇ ತಿದ್ದುಪಡಿಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು. ರಾಜ್ಯಗಳ ಸ್ವಾಯತ್ತತೆ ಹೆಚ್ಚಬೇಕು. ಪಂಚಾಯತು ರಾಜ್ಯಗಳಿಗೆ ಸಂವಿಧಾನದಲ್ಲಿ ಮಾನ್ಯತೆ ನೀಡಬೇಕು. ವಿಚಾರಣೆ ಇಲ್ಲದೆ ದಸ್ತಗಿರಿ ಮಾಡುವ ಹಾಗೂ ಸೆರೆಮನೆಗೆ ಕಳಿಸುವ ಎಲ್ಲಾ ಶಾಸನಗಳನ್ನು ರದ್ದುಗೊಳಿಸಬೇಕು. ಕಾರ್ಮಿಕ ಸಂಘಗಳಲ್ಲಿ ಮತ್ತು ರಾಜಕೀಯ ಪಕ್ಷಗಳಲ್ಲಿ ಭಾಗವಹಿಸುವ ಯಾವ ಕಾರ್ಯಕರ್ತರಿಗೂ ಕಿರುಕುಳ ಕೊಡಬಾರದು. ಕೆಲಸಗಾರರಿಗೆ, ನೌಕರರಿಗೆ, ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ಬುದ್ಧಿಜೀವಿಗಳಿಗೆ ಸಂಪೂರ್ಣ ರಾಜಕೀಯ ಹಾಗೂ ಸಂಘಟನಾ ಸ್ವಾತಂತ್ರ್ಯ ನೀಡಬೇಕು. ಕಾರ್ಮಿಕರಿಗೆ ಕೈಗಾರಿಕಾ ಆಡಳಿತದಲ್ಲಿ ಎಲ್ಲಾ ಹಂತಗಳಲ್ಲಿಯೂ ಭಾಗವಹಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಅವಕಾಶಗಳಿರಬೇಕು. ಗ್ರಾಮಗಳ ಮಟ್ಟದಲ್ಲಿ ಜನತಾ ಸಮಿತಿಗಳನ್ನು ನಿರ್ಮಿಸಬೇಕು. ಗ್ರಾಮದ ಎಲ್ಲಾ ಭೂಸಂಬಂಧದ ವಿವಾದಗಳನ್ನು ಈ ಸಮಿತಿಗಳ ಮೂಲಕ ಇತ್ಯರ್ಥಗೊಳಿಸಬೇಕು. ಈ ಸಮಿತಿಗಳಿಗೆ ಕಾನೂನಿನ ಅಧಿಕಾರ ಕೊಡಬೇಕು. ಇವುಗಳಲ್ಲಿ ಕೃಷಿ ಕಾರ್ಮಿಕರಿಗೂ, ಬಡರೈತರಿಗೂ ಬಹುಮತವಿರುವ ಪ್ರಾತಿನಿಧ್ಯವಿರಬೇಕು. ಪಂಚಾಯತು ಮಟ್ಟದಲ್ಲಿ ಜನತಾ ಸಮಿತಿಗಳು ಹೆಚ್ಚುವರಿ ಭೂಹಿಡುವಳಿಗಳನ್ನು ವಶಪಡಿಸಿಕೊಳ್ಳಲು ಮತ್ತು ಅವುಗಳನ್ನು ಮರುವಿತರಣೆ ಮಾಡಲು ಯಶಸ್ವಿಯಾಗಿ ಸಹಕರಿಸಬೇಕು. ನಗರಪ್ರದೇಶಗಳಲ್ಲಿಯೂ ಅಂತಹ ಜನತಾ ಸಮಿತಿಗಳನ್ನು ರಚಿಸಬೇಕು. ಅವುಗಳು ಜೀವನಾವಶ್ಯಕ ಸಾಮಗ್ರಿಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಸಮರ್ಪಕವಾಗಿ ಹಂಚುವಂತೆ ಸಹಕರಿಸಬೇಕು. ಅವುಗಳು ಅಕ್ರಮ ಸಂಗ್ರಹಣೆ, ದುರ್ಮಿಶ್ರಣ ಇತ್ಯಾದಿಗಳನ್ನು ಪರಿಣಾಮಕಾರಿಯಾಗಿ ನಿರೋಧಿಸಬೇಕು. ಕಾರ್ಮಿಕರ ಸಂಘಗಳನ್ನು ಕಡ್ಡಾಯವಾಗಿ ಗೌರವಿಸಬೇಕು. ಆಡಳಿತದೊಡನೆ ಅವುಗಳಿಗೆ ಸಾಮೂಹಿಕ ಚೌಕಾಶಿಯ ಅನಿರ್ಬಂಧಿತ ಹಕ್ಕನ್ನು ಗೌರವಿಸಬೇಕು. ಕಾರ್ಮಿಕ ಸಂಘಗಳು ಪ್ರಜಾಸತ್ತಾತ್ಮಕವಾಗಿ ಕಾರ್ಯ ನಡೆಸಬೇಕು. ಅವುಗಳೊಡನೆ ಸರಕಾರವು ಕಾರ್ಮಿಕರ ಧೋರಣೆ ರೂಪಿಸುವಾಗ ಎಲ್ಲಾ ಹಂತಗಳಲ್ಲಿಯೂ ಚರ್ಚಿಸಿ ಅವುಗಳ ವಿಶ್ವಾಸ ಗಳಿಸಬೇಕು. ಎಲ್ಲಾ ಪ್ರಾಯದ ಜನರಿಗೆ ಶಿಕ್ಷಣ ಕೊಡಬೇಕು. ಮುಖ್ಯವಾಗಿ ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣವು ಆದ್ಯತೆ ಪಡೆದು ಅದು ಕಡ್ಡಾಯವಾಗಬೇಕು. ಶಿಕ್ಷಣವು ವೃತ್ತಿಪರವಾಗಿದ್ದು ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಜಾತ್ಯಾತೀತತೆ ಮತ್ತು ಪ್ರಚೋದಿಸುವಂತಿರಬೇಕು. ನಾಡಿನ ಜನರನ್ನು ಸಂಪತ್‌ಸಮೃದ್ಧರನ್ನಾಗಿ ಸಮಾಜವಾದಿ ವ್ಯವಸ್ಥೆಯತ್ತ ಸಾಗಿಸುವ ಮಾರ್ಗದರ್ಶಿಯಾಗಿರಬೇಕು.

(ಮುಗಿಯಿತು)

ಅ. 27, 28 ರಂದು ಬೆಂಗಳೂರು ಜಿಲ್ಲಾ ರೈತ ಸಮ್ಮೇಳನ

ಬರುವ ಅ. 27 ಮತ್ತು 28 ರಂದು ಬೆಂಗಳೂರು ಜಿಲ್ಲಾ ರೈತ ಸಂಘದ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಲಾಗುವುದು ಎಂದು ರೈತ ಸಂಘದ ಕಾರ್ಯದರ್ಶಿ ಕಾಂ. ಜಗನ್ನಾಥ್ ತಿಳಿಸಿದ್ದಾರೆ.

ಸೆ. 23 ರಂದು ಬೆಂಗಳೂರಿನಲ್ಲಿ ಜರುಗಿದ ಜಿಲ್ಲಾ ರೈತಸಂಘದ ಕಾರ್ಯಕಾರಿ ಸಮಿತಿಯಲ್ಲಿ ಈ ನಿರ್ಧಾರ ತೆಗೆದುಕೊಂಡು ಸಮ್ಮೇಳನದ ಖರ್ಚು ವೆಚ್ಚಕ್ಕಾಗಿ 5000 ರೂಪಾಯಿಗಳನ್ನು ಸಂಗ್ರಹಿಸಲು ನಿರ್ಧರಿಸಲಾಯಿತು.

ಸಮ್ಮೇಳನಕ್ಕೆ ಸ್ವಾಗತ ಸಮಿತಿಯೊಂದನ್ನು ರಚಿಸಿ ಸಮಿತಿಯ ಅಧ್ಯಕ್ಷರಾಗಿ ಕಾಂ. ರಾಮಭದ್ರಯ್ಯ ಅವರನ್ನು, ಸಂಚಾಲಕರನ್ನಾಗಿ ಕಾಂ. ಪಿ. ಜಗನ್ನಾಥ್ ಅವರನ್ನು ನೇಮಿಸಲಾಯಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿ. ಐ. ಟಿ. ಯು. ಮತ್ತು ಎಸ್. ಎಫ್. ಐ. ಸಾಮೂಹಿಕ ಸಂಘಟನೆಗಳನ್ನು ಸ್ವಾಗತ ಸಮಿತಿಯ ಸದಸ್ಯರನ್ನಾಗಿ ತೆಗೆದುಕೊಳ್ಳಲಾಗಿದೆ.

ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಕಾರ್ಯಕಾರಿ ಸಮಿತಿಯಲ್ಲಿ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರ ರಾವ್ ಅವರೂ ಭಾಗವಹಿಸಿದ್ದರು.

○

ಕಾರವಾರದಲ್ಲಿ ರೈತರ ಹೋರಾಟ ಸಿದ್ಧತೆ

ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಕಿಸಾನ್ ಸಭೆಗಳು ರೈತರ ಹಲವಾರು ಸಂಕಷ್ಟಗಳ ಬಗ್ಗೆ ಅವರಿಗೆ ತಿಳುವಳಿಕೆ ನೀಡಿ, ಅವರನ್ನು ಹೋರಾಟಕ್ಕೆ ಅಣಿಮಾಡುತ್ತಿದೆ. ರೈತರ ಮುಖ್ಯ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಮನವಿ ಅರ್ಪಿಸಲು ಸಹಿಸಂಗ್ರಹಣೆ ನಡೆಸಿ, ಅಕ್ಟೋಬರ್ 5 ರಂದು ಕೋಡಿಬಾಗ್‌ನಿಂದ ಮೆರವಣಿಗೆ ನಡೆಸಿ, ಡೆಪ್ಯುಟಿ ಕಮೀಷನರ್ ಅವರಿಗೆ ಮನವಿ ಅರ್ಪಿಸುವ ಕಾರ್ಯಕ್ರಮವಿದೆ. ಗೇಣಿದಾರ ರೈತರಿಂದ ಪರಿಹಾರ ಹಣ ವಸೂಲಿ ಮಾಡಬಾರದು, ಭೂಪಂಚಾಯ್ತಿಗಳಲ್ಲಿ ಚುನಾಯಿತ ರೈತ ಪ್ರತಿನಿಧಿಗಳ ನೇಮಕ, ಭೂಮಾಲೀಕರ ಪರ ತೀರ್ಪುಗಳ ಮರುವಿಚಾರಣೆ. ಬ್ಯಾಂಕು, ಸಹಕಾರಿ ಸಂಘಗಳಲ್ಲಿನ ರೈತರ ಸಾಲದ ಹೊರೆಯ ರದ್ದು. ದಿನಕ್ಕೆ 8 ರೂ. ಕನಿಷ್ಠ ಕೂಲಿ ನಿಗದಿ, ಇತ್ಯಾದಿ ಹಲವಾರು ಬೇಡಿಕೆಗಳು ಮನವಿಯಲ್ಲಿವೆ. ಕಾಂ. ಎಂ. ಸಮಿಉಲ್ಲಾ, ಉಡಚಪ್ಪಾ ಬೊಬಾಟಿ, ಕಾಂ. ಎನ್. ಜಿ. ವ್ಹಾಳಸೇಕರ, ವಾಜಿಪುರುಷೋತ್ತಮ ನಾಯ್ಕ, ಗೋವಿಂದ ಸೈರುಶೇಟ ಅವರು ಈ ಕಾರ್ಯಕ್ರಮಗಳ ಹೊಣೆ ಹೊತ್ತಿದ್ದಾರೆ. ಮೆರವಣಿಗೆಯ ನೇತೃತ್ವ ವಹಿಸಲು ಕಾಂ. ಸ್ಥಳೇಕರ, ಕಾಂ. ಧಾರೇಶ್ವರ ಅವರನ್ನು ಕೇಳಿಕೊಳ್ಳಲಾಗಿದೆ.

○

ಕಾವೂರು ಸಹಕಾರಿ ಸಂಘದ ವಾರ್ಷಿಕ ಸಭೆ

ಮಂಗಳೂರು ಬಳಿಯ ಕಾವೂರು ವ್ಯವಸಾಯ ಸೇವಾ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಸೆ. 23 ರಂದು ಕಾವೂರಿನಲ್ಲಿ ಜರುಗಿತು. ಕಾಂ. ಕೆ. ಆರ್. ಶ್ರೀಯಾನ್ ಅವರು ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿದ್ದರು. 1978-79 ರ ಆಡಿಟ್ ವರದಿ ಮತ್ತು 79-80ರ ಬಜೆಟ್ ಅನ್ನು ಸಂಘದ ಕಾರ್ಯದರ್ಶಿಗಳು ಸಭೆಯ ಮುಂದಿಟ್ಟರು. ಅದು ಸರ್ವಾನುಮತದಿಂದ ಅಂಗೀಕೃತವಾಯಿತು. 79-80ನೇ ಸಾಲಿಗೆ ಸಂಘದ ವಿವಿಧ ವಿಭಾಗಗಳಿಗೆ ಎಸ್. ಸಾಧು, ಕೆ. ಹೊನ್ನಯ್ಯ, ಭಾಸ್ಕರಕೊಂಡೆ, ಕೆ. ಗಿರಿಯಪ್ಪಶೆಟ್ಟಿಗಾರ, ತುಕ್ರ, ಕೆ. ಆರ್. ಶ್ರೀಯಾನ್, ಕೆ. ಜಾರಪ್ಪ, ಕೆ. ಆರ್. ಪೈ, ಕೆ. ನಾರಾಯಣಶೆಟ್ಟಿಯವರುಗಳು ಅವಿರೋಧವಾಗಿ ಆಯ್ಕೆಯಾದರು.

ಸಹಕಾರಿ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ ಸೇವೆಸಲ್ಲಿಸಿ ನಿವೃತ್ತರಾಗಿರುವ ಎಲ್. ಇ. ಎಂ. ಸಾಲ್ಡಾನ, ನಾಗುರಿ ವ್ಯವಸಾಯ ಸೇವಾ ಸಹಕಾರ ಸಂಘದ ಕಾರ್ಯದರ್ಶಿ ಎಂ. ಎಸ್. ರಾಮು ಮತ್ತು ಕೆ. ಜಾರಪ್ಪ ಅವರು ಸಹಕಾರಿ ತತ್ವಗಳ ಕುರಿತು ಸದಸ್ಯರಿಗೆ ವಿವರಣೆ ಇತ್ತರು. ಕೆ. ಟಿ. ಭಂಡಾರಿ ವಂದಿಸಿದರು.

○

ಜಮ್‌ಷೆಡ್‌ಪುರದಲ್ಲಿ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳ ಸವಾಲು

ಜಮ್‌ಷೆಡ್‌ಪುರದಲ್ಲಿ ಮೂರನೇ ಬಾರಿಗೆ ಕೋಮು ಕಲಹಗಳು ಹತ್ತಿಕೊಂಡಿವೆ. ರಾಂಚಿ, ಗಯಾ ಮತ್ತು ಸಸಾರಮ್‌ಗಳಲ್ಲೂ ಕೋಮುಬೆಂಕಿ ಹತ್ತಿಸುವ ಪ್ರಯತ್ನ ನಡೆಸಲಾಗಿದೆ. ಒಟ್ಟಿನಲ್ಲಿ ಬಿಹಾರದಲ್ಲಿ ಬಿಕ್ಕಟ್ಟು ತಲೆದೋರಿದೆ.

1979ರ ಏಪ್ರಿಲ್‌ನಲ್ಲಿ ಜಮ್‌ಷೆಡ್‌ಪುರದಲ್ಲಿ ಮೊದಲಬಾರಿ ಗಲಭೆಯಾದಾಗ ರಾಜ್ಯದ ಜನತಾ ಪಕ್ಷದೊಳಗಿನ ಗಲಭೆ ಹೊರಗೆ ಬಂದು ಶ್ರೀ ಕರ್ಪೂರಿ ಠಾಕೂರ್ ಅವಿಶ್ವಾಸ ನಿರ್ಣಯವನ್ನು ಎದುರಿಸಲಾರದೆ ಕೆಳಗಿಳಿಯಬೇಕಾಯಿತು. ಶ್ರೀ ರಾಮ್ ಸುಂದರ್‌ದಾಸ್ ಅಧಿಕಾರ ವಹಿಸಿಕೊಂಡಾಗಿನಿಂದಲೂ ಬಿಹಾರದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಘಟಕ ಮತ್ತು ಇತರ ಎಡಪಕ್ಷಗಳು, ಜಮ್‌ಷೆಡ್‌ಪುರದ ಆರೆಸ್ಸೆಸ್ ವಿಧಾನ ಸಭಾ ಸದಸ್ಯರನ್ನು ಬಂಧಿಸಿ, ಆರೆಸ್ಸೆಸ್–ಜನಸಂಘ ಮಂತ್ರಿಗಳನ್ನು ಸಂಪುಟದಿಂದ ತೆಗೆದುಹಾಕಬೇಕು ಎಂದು ಒತ್ತಾಯಿಸುತ್ತಲೇ ಇವೆ. ಆದರೆ ಹಿಂದೆ ಸಮಾಜವಾದಿಯಾಗಿದ್ದ ರಾಮ್‌ಸುಂದರ್‌ದಾಸ್ ಈ ಬೇಡಿಕೆಗೆ ಮಣಿಯದೆ, ಅಂಥ ಮಂತ್ರಿಗಳ ಕೈಗೊಂಬೆಯಾಗುತ್ತಿದ್ದಾರೆ. ಏಪ್ರಿಲ್ ಗಲಭೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ಪೂರಿ ಠಾಕೂರ್ ನೇಮಿಸಿದ್ದ ಆಯೋಗವನ್ನೂ ಕೂಡ ಈಗ ಕ್ಷುದ್ರ ಕಾರಣಗಳಿಗಾಗಿ ಕೆಲವು ಕಾಲ ರದ್ದು ಮಾಡಲಾಗಿತ್ತು. ಈಗ ಸಾರ್ವಜನಿಕ ಒತ್ತಾಯದಿಂದ ಮತ್ತೆ ನೇಮಿಸಲಾಗಿದೆ.

ದಾಸ್ ಸರ್ಕಾರ ಬಂದ ಒಂದೂವರೆ ತಿಂಗಳಲ್ಲೇ ಜಮ್‌ಷೆಡ್‌ಪುರ ಮತ್ತೊಂದು ಗಲಭೆ ವೀಕ್ಷಿಸಿತು. ಈ ಎಲ್ಲ ಗಲಭೆಗಳ ಹಿಂದೆ ಆರೆಸ್ಸೆಸ್ ಇದೆ. ಸಂಜಯ್ ಬ್ರಾಂಡಿನ ಗೂಂಡಾಗಳು ಮತ್ತು ಜಮಾತ್-ಏ-ಇಸ್ಲಾಮಿನವರೂ ಕೂಡ ಇದರಲ್ಲಿ ಪಾತ್ರ ವಹಿಸುತ್ತಿದ್ದಾರೆ.

ಆರೆಸ್ಸೆಸ್ ನಾಯಕರು ಜಮ್‌ಷೆಡ್‌ಪುರಕ್ಕೆ ಭೇಟಿ ನೀಡಿದ ತಕ್ಷಣವೇ ಈ ಗಲಭೆಗಳು ನಡೆದಿವೆ ಎಂಬುದಕ್ಕೆ ದಾಸ್ ಏನು ಹೇಳುತ್ತಾರೆ? ಮಾರ್ಚಿ 28 ರಿಂದ ಏಪ್ರಿಲ್ 1 ರ ವರೆಗೆ ಸ್ಥಳೀಯ ಕಾಲೇಜೊಂದರಲ್ಲಿ ಬಾಳಾಸಾಹೇಬ ದೇವರಸ್ ಒಂದು ಕ್ಯಾಂಪ್ ನಡೆಸಿದ್ದರು. ಕಾಲೇಜಿನಲ್ಲಿ ಕ್ಯಾಂಪ್ ನಡೆಸಲು ಅನುಮತಿಯನ್ನು ರಾಂಚಿ ವಿಶ್ವವಿದ್ಯಾಲಯದ ಉಪಕುಲಪತಿಗಳು ಕೊಡುವಾಗ ಆರೆಸ್ಸೆಸ್-ಜನಸಂಘ ಮಂತ್ರಿಗಳು ನೋಡಿಕೊಂಡರು. ನಂತರ ಏಪ್ರಿಲ್ ಗಲಭೆಗಳು ನಡೆದವು.

ಮೂರನೇ ಬಾರಿ ಗಲಭೆಗಳು ನಡೆಯುವುದಕ್ಕೆ ಮುಂಚೆ ಆರೆಸ್ಸೆಸ್‌ನ ಪ್ರಧಾನ ಕಾರ್ಯದರ್ಶಿ ಜಮ್‌ಷೆಡ್‌ಪುರಕ್ಕೆ ಬಂದರು. ಗಲಭೆ ಆರಂಭವಾಗಿ, ವಿಚಾರಣಾ ಆಯೋಗ ಕಾರ್ಯಾರಂಭ ಮಾಡುವ ದಿನಕ್ಕೆ ಸರಿಯಾಗಿ, ಆದುವರೆಗೂ ಜಮ್‌ಷೆಡ್‌ಪುರದಲ್ಲಿದ್ದ ಜನಸಂಘ ರಾಜ್ಯಮಂತ್ರಿಯೊಬ್ಬರು ಪಾಟ್ನಾಗೆ ಹಿಂತಿರುಗಿದರು. ವಿಚಾರಣಾ ಆಯೋಗ ನಡೆಸದಂತೆ ಮಾಡುವುದು ಈ ಬಾರಿಯ ಗಲಭೆಗಳ ಉದ್ದೇಶವಾಗಿತ್ತು.

ಟಾಟಾಗಳು ಈ ಬಾರಿ ಆರೆಸ್ಸೆಸ್ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಸಿಂಗ್‌ನ ಭಾಷಣಕ್ಕೆ ಬಹಿರಂಗ ಬೆಂಬಲ ಕೊಟ್ಟಿದ್ದರು. ಟಾಟಾ ವಿದ್ಯಾಸಂಸ್ಥೆಗಳ ಎಲ್ಲ ಶಿಕ್ಷಕರೂ ಈ ಸಭೆಗೆ ಬರಬೇಕೆಂದು ತಾಕೀತು ಮಾಡಲಾಗಿತ್ತು. ಗಲಭೆ ಎರಡು ಮೂರು ದಿನಗಳ ನಂತರ ನಡೆಯಿತು.

ಕಾರ್ಮಿಕ ಮತ್ತು ರೈತಜನಾಂಗದಲ್ಲಿ ಬೆಳೆಯುತ್ತಿರುವ ಒಗ್ಗಟ್ಟನ್ನು ಮುರಿಯಲು ಟಾಟಾಗಳು ಮತ್ತು ಭಾರಿ ಭೂಮಾಲೀಕರು ಈ ಗಲಭೆಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಬಿಹಾರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಗಮನಿಸಿದೆ. ಕೋಮುವಾದಿ ಮತ್ತು ಸರ್ವಾಧಿಕಾರಿ ಶಕ್ತಿಗಳ ಈ ಗಲಭೆಗಳು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಒಂದು ದೊಡ್ಡ ಸವಾಲಾಗಿದೆ. ಕೋಮು ಶಾಂತಿಯನ್ನು ಕಾಪಾಡಲು ಈಗ ಎಲ್ಲ ಪ್ರಯತ್ನಗಳನ್ನೂ ಮಾಡಬೇಕಾಗಿದೆ.

●

ರಾಯಚೂರು ರಿಕ್ಷಾ ಚಾಲಕರ ಸಭೆ: ಅನ್ಯಾಯದ ವಿರುದ್ಧ ಹೋರಾಟಕ್ಕೆ ನಿರ್ಧಾರ

ಬೆಲೆಏರಿಕೆ ಮತ್ತು ಪೋಲೀಸ್ ದಬ್ಬಾಳಿಕೆಯ ವಿರುದ್ಧ ಹಾಗೂ ರಿಕ್ಷಾ ಮಾಲೀಕರುಗಳಿಗೆ ಹೆಚ್ಚಾಗಿ ಕೊಡುತ್ತಿರುವ ಬಾಡಿಗೆ ವಿರುದ್ಧ ಹೋರಾಡಿ ಸೈಕಲ್ ರಿಕ್ಷಾ ಚಾಲಕರ ಬದುಕಿನಲ್ಲಿ ಸುಧಾರಣೆಗಳನ್ನು ತರಲು ರಾಯಚೂರಿನಲ್ಲಿ ಇತ್ತೀಚೆಗೆ ಸೇರಿದ್ದ ರಿಕ್ಷಾ ಚಾಲಕರ ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ಕಾಂ. ಚಂದ್ರಶೇಖರ ಬಾಳಿ ಮತ್ತು ಪುರುಷೋತ್ತಮ್ ಭಾಗವಹಿಸಿದ್ದು ಈ ಕೆಳಕಂಡ ಬೇಡಿಕೆಗಳ ಈಡೇರಿಕೆಗೆ ಸಂಘಟಿತ ಹೋರಾಟ ಮಾಡಲು ನಿರ್ಧರಿಸಲಾಯಿತು.

1. ರಿಕ್ಷಾ ಬಾಡಿಗೆಯನ್ನು 6 ರೂ. ನಿಂದ 3 ರೂ. ಗೆ ಇಳಿಸಬೇಕು.

2. ರಿಕ್ಷಾಗಳ ಸಂಖ್ಯೆ ಹೆಚ್ಚದಂತೆ ತಡೆಯಬೇಕು.

3. ವಾರಕ್ಕೆ ಒಂದು ದಿವಸ ರಿಕ್ಷಾ ಗಳಿಕೆಯನ್ನು ಪೂರ್ಣವಾಗಿ ಚಾಲಕರಿಗೇ ಕೊಡಬೇಕು.

4. ನಗರಸಭೆ ತೆರಿಗೆಯಲ್ಲಿ ರಿಕ್ಷಾ ಚಾಲಕರಿಗೆ ರಿಯಾಯ್ತಿ ಕೊಡಬೇಕು.

5. ರಿಕ್ಷಾ ದೀಪಗಳನ್ನು ಮಾಲೀಕರೇ ಒದಗಿಸಬೇಕು.

6. ಪೋಲೀಸ್ ಮೊಕದ್ದಮೆಗಳನ್ನು ರಿಕ್ಷಾ ಚಾಲಕರಿಗೆ ಹಾಕಿ ಅಲೆಸುವುದು ನಿಲ್ಲಬೇಕು.

7. ನಗರದ ರಸ್ತೆಗಳ ರಿಪೇರಿಯಾಗಬೇಕು.

8. ರಿಕ್ಷಾ ನಿಲ್ದಾಣಗಳಿಗೆ ನಗರಸಭೆ ವ್ಯವಸ್ಥೆ ಮಾಡಬೇಕು.

○

ಪಂಜಾಬಿನಲ್ಲಿ ಕೃಷಿ ಕಾರ್ಮಿಕರ ಬೃಹತ್ ಪ್ರದರ್ಶನ

ಪಂಜಾಬ್ ರಾಜ್ಯದ ಎಲ್ಲ ಜಿಲ್ಲೆಗಳ ಸಾವಿರಾರು ಕೃಷಿಕಾರ್ಮಿಕರು ಒಂದು ಬೃಹತ್ ರಾಜ್ಯಮಟ್ಟದ ಪ್ರದರ್ಶನವನ್ನು ಸೆಪ್ಟೆಂಬರ್ 3 ರಂದು ನಡೆಸಿದರು. ವಾಸಿಸಲರ್ಹವಾದ ಜಾಗಗಳಲ್ಲಿ ಮನೆ ನಿವೇಶಗಳ ಹಂಚಿಕೆ, ಫಾರಂ ಜಾಗಗಳ ಹಂಚಿಕೆ, ಕೃಷಿಕಾರ್ಮಿಕರಿಗೆ ಕನಿಷ್ಠ ವೇತನದ ಕಾನೂನನ್ನು ಸಮರ್ಪಕವಾಗಿ ಜಾರಿಗೊಳಿಸಲು ಆಡಳಿತ ವ್ಯವಸ್ಥೆ ಮಾಡುವುದು, ಪೋಲೀಸ್ ಮತ್ತು ಸಾಮಾಜಿಕ ದಬ್ಬಾಳಿಕೆಯ ಕೊನೆ, ಸುಲಭ ಸಾಲದ ವ್ಯವಸ್ಥೆ, ನ್ಯಾಯಬೆಲೆ ಅಂಗಡಿಗಳ ಆರಂಭ, ಆಹಾರಕ್ಕಾಗಿ ಕೆಲಸ ಯೋಜನೆಯ ಸಮರ್ಪಕ ಜಾರಿ ಇತ್ಯಾದಿ ಬೇಡಿಕೆಗಳನ್ನು ನೆರವೇರಿಸಿಕೊಳ್ಳಲು ಅವರು ಈ ಪ್ರದರ್ಶನ ನಡೆಸಿದರು.

ಜಲಂಧರ್‌ನಲ್ಲಿ ನಡೆದ ಈ ಪ್ರದರ್ಶನಕ್ಕೆ ಹಲವಾರು ತಿಂಗಳುಗಳಿಂದಲೂ ಪಂಜಾಬ್ ದೇಹತಿ ಮಜ್ದೂರ್ ಸಭಾ ತಯಾರಿ ನಡೆಸಿತ್ತು. ಎಲ್ಲ ಹಳ್ಳಿಗಳಿಂದ ಕೃಷಿಕಾರ್ಮಿಕರು, ಮಹಿಳೆಯರು ಟ್ರಕ್ಕು, ಟ್ರಾಲಿ, ಬಸ್ಸುಗಳಲ್ಲಿ ಪ್ರದರ್ಶನಕ್ಕೆ ಬಂದು ಸೇರಿದ್ದರು. ಕೃಷಿಕಾರ್ಮಿಕರು ಮತ್ತು ಬಡರೈತರನ್ನು ಆಧಾರವಾಗಿಟ್ಟುಕೊಂಡ ಬಲಿಷ್ಠ ರೈತಚಳುವಳಿಯ ಬೆಳವಣಿಗೆಯನ್ನು ಈ ಪ್ರದರ್ಶನ ಸೂಚಿಸಿತು.

●

ದೊಡ್ಡ ಸಂಖ್ಯೆಯಲ್ಲಿ ಸದಸ್ಯತ್ವ ಸೇರಿಸಲು

ಪ್ರಾಂತ ರೈತಸಂಘದ ನಿರ್ಣಯ

ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯ ಕಾರ್ಯಕಾರಿ ಸಮಿತಿಯು ಸೆಪ್ಟೆಂಬರ 27 ರಂದು ಕಾಂ. ಎಚ್. ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಸಂಘಟನಾ ವರದಿಗಳನ್ನು ಮತ್ತು ಹಳ್ಳಿಯ ಬಡವರ ತುರ್ತು ಸಮಸ್ಯೆಗಳನ್ನು ಚರ್ಚಿಸಿದ ರಾಜ್ಯಸಮಿತಿಯು ಸಂಘಟನೆಯನ್ನು ಬಲಪಡಿಸಲು ಮತ್ತು ಸುಸಂಘಟಿತ ಹೋರಾಟಗಳನ್ನು ನಡೆಸಲು ಮುಂದಾಗಲು ಕರೆ ಇತ್ತಿತು. ಹಳಿಯಾಳದಲ್ಲಿ ಸೇರಿದ್ದ ಸಭೆಯ ತೀರ್ಮಾನದಂತೆ ಎಲ್ಲಾ ಜಿಲ್ಲಾ ಸಮ್ಮೇಳನಗಳನ್ನೂ ನಿಗದಿಯಾದಂತೆ ನಡೆಸಲೂ ಜಿಲ್ಲಾ ಸಮಿತಿಗಳಿಗೆ ಆದೇಶವಿತ್ತಿತು. 1979-80ರ ಸಾಲಿಗೆ ಕರ್ನಾಟಕ ರಾಜ್ಯದಲ್ಲಿ ಕನಿಷ್ಟ 75,000 (ಎಪ್ಪತ್ತೈದು ಸಹಸ್ರ) ಸದಸ್ಯರನ್ನು ಸೇರಿಸಲು ಸಮಿತಿಯು ನಿರ್ಧರಿಸಿತು. ಹಳಿಯಾಳದಲ್ಲಿ ಪೋಲೀಸ್ ಗೋಲೀಬಾರಿಗೆ ತುತ್ತಾಗಿ ಸಾವನ್ನಪ್ಪಿದ ದಿ. ಮಾರುತಿ ಗಣೇಶ ಪವಾರ್ ಅವರ ಕುಟುಂಬದ ಸಹಾಯಕ್ಕೆಂದು ಸಂಗ್ರಹವಾಗಿರುವ ನಿಧಿಯನ್ನು ಅವರ ಕುಟುಂಬಕ್ಕೆ ತಲಪಿಸಿಕೊಡಲು ನಿರ್ಣಯಿಸಲಾಯ್ತು. ಈ ಬಗ್ಗೆ ಸಂಗ್ರಹವಾಗಿರುವ ನಿಧಿಯನ್ನು ಕೂಡಲೇ ರಾಜ್ಯಸಮಿತಿ ಕೇಂದ್ರಕ್ಕೆ ತಲುಪಿಸಿಕೊಡಲು ಎಲ್ಲಾ ಕೆಳ ಘಟಕಗಳಿಗೆ ಆದೇಶ ನೀಡಲಾಯಿತು.

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾತಗುಣಿ ಎಸ್ಟೇಟಿನ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿದ ರಾಜ್ಯಸಮಿತಿಯು, ಸರಕಾರವು ಮಧ್ಯಪ್ರವೇಶಿಸಿ ನ್ಯಾಯ ಒದಗಿಸಲು ಒತ್ತಾಯಿಸಿತು. ●

ಸರ್ವಾಧಿಕಾರಿ ಮತ್ತು ಮತೀಯ ಶಕ್ತಿಗಳ ಸೋಲಿಗೆ ಎಸ್.ಎಫ್.ಐ. ನಿರ್ಧಾರ

ಮುಂಬರಲಿರುವ ಚುನಾವಣೆಗಳಲ್ಲಿ ಮತೀಯ ಮತ್ತು ಸರ್ವಾಧಿಕಾರಿ ಶಕ್ತಿಗಳನ್ನು ನೆಲಸಮ ಮಾಡಬೇಕು. ಇದಕ್ಕಾಗಿ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ 5 ಲಕ್ಷ ಸದಸ್ಯರು ಸತತವಾಗಿ ದುಡಿಯಲಿದ್ದಾರೆ. ಈ ನಿರ್ಧಾರವನ್ನು ಎಸ್. ಎಫ್. ಐ. ನ ಕೇಂದ್ರ ಕಾರ್ಯನಿರ್ವಾಹಕ ಸಮಿತಿ ತೆಗೆದುಕೊಂಡಿದೆ.

ಎಸ್. ಎಫ್. ಐ. ನಮ್ಮ ದೇಶದ ಅತಿ ದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿದೆ. ಇತ್ತೀಚೆಗೆ ಗುಜರಾತ್, ಹರ್‍ಯಾಣ, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲೂ ಎಸ್. ಎಫ್. ಐ. ಅಪಾರವಾಗಿ ಬೆಳೆದಿದೆ. ಮುಖ್ಯವಾಗಿ, ಆರ್. ಎಸ್. ಎಸ್. ನ ಹಿಡಿತದಲ್ಲಿದ್ದ ನವದೆಹಲಿಯ ವಿದ್ಯಾರ್ಥಿ ಸಂಘಗಳು ಎಸ್. ಎಫ್. ಐ. ಕಡೆಗೆ ಬಂದಿವೆ. ಒಟ್ಟಾರೆ ವಿದ್ಯಾರ್ಥಿ ಸಮುದಾಯಕ್ಕೆ ದಾರಿದೀಪವಾಗಿರುವ ಎಸ್. ಎಫ್. ಐ. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಎಲ್ಲಾ ಹೋರಾಟಗಳಿಗೂ ನಾಯಕತ್ವ ಕೊಡಲಿದೆ ಎಂದು ಕಾರ್ಯನಿರ್ವಾಹಕ ಸಮಿತಿ ತಿಳಿಸಿದೆ.

ಅಕ್ಟೋಬರ್ 21 ಮತ್ತು 22 ರಂದು ತುಮಕೂರು ಜಿಲ್ಲಾ ರೈತ ಸಮ್ಮೇಳನ

ತುಮಕೂರು ಜಿಲ್ಲೆಯ ರೈತಸಮ್ಮೇಳನವನ್ನು ಅಕ್ಟೋಬರ್ 21 ಮತ್ತು 22ರಂದು ಕುಣಿಗಲ್‌ನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಮ್ಮೇಳನದ ಕೊನೆಯ ದಿನ ರೈತ-ಕೂಲಿಗಾರರ ಬೃಹತ್ತಾದ ಸಭೆ, ಮೆರವಣಿಗೆಗಳನ್ನು ಜರುಗಿಸಲು ತೀರ್ಮಾನಿಸಲಾಗಿದ್ದು, ಈಗಾಗಲೇ ಸಮ್ಮೇಳನಕ್ಕೆ ತಯ್ಯಾರಿ ನಡೆಯುತ್ತಿದೆ ಎಂಬುದಾಗಿ ಪ್ರಾಂತ ರೈತಸಂಘದ ಉಪಾಧ್ಯಕ್ಷರೂ ಮತ್ತು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ. ಎಚ್. ಸಿ. ಚನ್ನಪ್ಪ ಅವರು ವರದಿ ಮಾಡಿದ್ದಾರೆ. ○

ಸಿ.ಪಿ.ಐ. (ಎಂ) ಬೆಂಗಳೂರು ಜಿಲ್ಲಾ ಸಮಿತಿ ಸಭೆ:

ಕಿಸಾನ್ ಸಭಾ ಕೇಂದ್ರ ಸಮಿತಿ ಸಭೆ ಯಶಸ್ವಿಗೊಳಿಸಲು ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಸಭೆಯು 30-9-79ರಂದು ಬೆಂಗಳೂರಿನಲ್ಲಿ ಸಭೆ ಸೇರಿತು. ಪಕ್ಷದ ಕೇಂದ್ರ ಸಮಿತಿಯ ತೀರ್ಮಾನಗಳ ಬಗ್ಗೆ ಮತ್ತು ರಾಜ್ಯಸಮಿತಿ ಸಭೆಯ ನಿರ್ಣಯಗಳ ಬಗ್ಗೆ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರು ವರದಿ ಇತ್ತರು. ಸಭೆಯಲ್ಲಿ ಉಪಸ್ಥಿತರಿದ್ದ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್, ಅಧ್ಯಕ್ಷ-ಕಾಂ. ಎಚ್. ಮುಗುವಾಳಪ್ಪ ಮತ್ತು ಖಜಾಂಚಿ ಕಾಂ. ಪಿ.ಜಗನ್ನಾಥ್ ಅವರುಗಳು ನಗರದಲ್ಲಿ ಅಕ್ಟೋಬರ್ 26, 27 ಮತ್ತು 28ರಂದು ಜರಗಲಿರುವ ಕಿಸಾನ್ ಸಭಾ ಕೇಂದ್ರ ಸಮಿತಿ ಸಭೆಯ ವಿವರಗಳನ್ನು ಇತ್ತು, ಈ ಸಭೆಯನ್ನು ಮತ್ತು 28ರಂದು ನಡೆಯತಕ್ಕ ರೈತ ಕಾರ್ಮಿಕರ ಬೃಹತ್ ಮೆರವಣಿಗೆ ಸಭೆಗಳನ್ನು ಯಶಸ್ವಿಗೊಳಿಸಲು ಸಹಕರಿಸಲು ವಿನಂತಿಸಿದರು. ಈ ಬಗ್ಗೆ ಚರ್ಚಿಸಿದ ಜಿಲ್ಲಾ ಸಮಿತಿಯು ಕೇಂದ್ರ ಸಮಿತಿ ಸಭೆಯನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಲು ಮತ್ತು 28ರಂದು ಜರಗಲಿರುವ ಕಾರ್ಯಕ್ರಮದಲ್ಲಿ ಶ್ರಮಜೀವಿಗಳನ್ನು ದೊಡ್ಡರೀತಿಯಲ್ಲಿ ಪಾಲ್ಗೊಳ್ಳುವಂತೆ ಶ್ರಮಿಸಲೂ ತೀರ್ಮಾನಿಸಲಾಯಿತು. ○

ಬೀಡಿ ಫೆಡರೇಷನ್ ಕರೆ

[2ನೇ ಪುಟದಿಂದ]

ತಯ್ಯಾರಿಯನ್ನು ಚರ್ಚಿಸಲಾಯ್ತು. ಅಕ್ಟೋಬರ್ 10 ರ ಒಳಗೆ ಬೇಡಿಕೆಗಳನ್ನೊಳಗೊಂಡ ನೋಟೀಸನ್ನು ಮಾಲಕರುಗಳಿಗೆ ಎಲ್ಲಾ ಪ್ರದೇಶಗಳಲ್ಲೂ ಕೊಡಬೇಕು; ಇದರ ಪ್ರತಿಯನ್ನು ಲೇಬರ್ ಕಮಿಷನರವರಿಗೆ ಕಳುಹಿಸಬೇಕು ಎಂದು ತೀರ್ಮಾನಿಸಲಾಯ್ತು.

ಅಕ್ಟೋಬರ್ 17 ರಂದು ಎಲ್ಲಾ ಪ್ರದೇಶಗಳಲ್ಲೂ ಬೃಹತ್ ಪ್ರಮಾಣದ ಮೆರವಣಿಗೆ ಮತ್ತು ಪ್ರತಿಭಟನಾ ಸಭೆಗಳನ್ನು ನಡೆಸಲು ತೀರ್ಮಾನಿಸಲಾಯ್ತು. ಪ್ರತಿ ಪ್ರದೇಶದಲ್ಲೂ ಸಂಬಂಧಪಟ್ಟ ಮುಖ್ಯ ರವಿನ್ಯೂ ಅಧಿಕಾರಿಗಳಿಗೆ ಮನವಿಅರ್ಪಿಸುವುದೆಂದೂ, ಬೆಂಗಳೂರಿನಲ್ಲಿ ಲೇಬರ್ ಕಮಿಷನರವರಿಗೆ ಮನವಿಯನ್ನು 17 ರಂದು ಸಲ್ಲಿಸುವುದೆಂದೂ ನಿರ್ಣಯಿಸಲಾಯ್ತು. 17 ರ ಕಾರ್ಯಕ್ರಮದ ಬಗ್ಗೆ ದೊಡ್ಡ ರೀತಿಯಲ್ಲಿ ಪ್ರಚಾರ, ಪ್ರಕ್ಷೋಬೆ ನಡೆಸಲೂ ತೀರ್ಮಾನಿಸಲಾಯ್ತು.

ರಾಜ್ಯದಲ್ಲಿ ಅಕ್ಟೋಬರ್ 26, 27 ಮತ್ತು 28 ರಂದು ಪ್ರ-ಪ್ರಥಮವಾಗಿ ಕೇಂದ್ರ ಕಿಸಾನ್ ಸಮಿತಿ ಸಭೆಯು ಸೇರುವುದನ್ನು ರಾಜ್ಯ ಫೆಡರೇಷನ್ ಸ್ವಾಗತಿಸಿತು. 28 ರಂದು ನಡೆಯುವ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಗಳನ್ನು ಯಶಸ್ವಿಗೊಳಿಸಲು ಸಹಕಾರ ನೀಡಲೂ ತೀರ್ಮಾನಿಸಲಾಯ್ತು.

ಫೆಡರೇಷನ್ ಮೀಟಿಂಗಿಗೆ ದ. ಕ. ಜಿಲ್ಲೆ, ಮೈಸೂರು, ಕೋಲಾರ, ಬೆಂಗಳೂರು, ಹರಿಹರ, ಕುಣಿಗಲ್ಲು, ತುಮಕೂರು, ಶಿರಾ ಮತ್ತಿತರ ಕಡೆಗಳ ಪ್ರತಿನಿಧಿಗಳು ಬಂದಿದ್ದರು.

ಫೆಡರೇಷನ್ನಿನ ಮುಖ್ಯ ಬೇಡಿಕೆಗಳು :

1. ಸಾವಿರ ಬೀಡಿಗೆ ಕನಿಷ್ಟ ರೂ. 9 ಕೂಲಿ ದೊರೆಯಬೇಕು. 2. ಶೇಕಡಾ 20 ಬೋನಸ್ ದೊರೆಯಬೇಕು. 3. ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕು. 4. ವಾರದಲ್ಲಿ ಆರುದಿನ ಕೆಲಸಕೊಡಬೇಕು. 5. ಬೀಡಿ ಏವರೇಜ್‌ನಲ್ಲಿ ಖೋತಾ ಮಾಡಬಾರದು. 6. ಕೆಲಸ ಕೊಡದ ದಿನಕ್ಕೆ ಲೇ ಆಫ್ ಸಂಬಳಕ್ಕಿಂತ ಕಡಿಮೆ ಆಗದಂತೆ ಸಂಬಳ ನೀಡಬೇಕು. ಇವೇ ಮೊದಲಾದುವುಗಳು. ●

ಅಕ್ಟೋಬರ್ 27 ಮತ್ತು 28 ರಂದು ಬೆಂಗಳೂರು ಜಿಲ್ಲಾ ರೈತ ಸಮ್ಮೇಳನ

ಬೆಂಗಳೂರು ಜಿಲ್ಲಾ ರೈತ ಸಂಘದ ವಿಸ್ತೃತ ಸಭೆಯು ತಾ॥ 23-9-79 ರಂದು ಸಭೆ ಸೇರಿತು. ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಅವರೂ ಉಪಸ್ಥಿತರಿದ್ದರು. ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ. ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯ ರೈತ ಸಂಘಟನೆ ಮತ್ತು ಹೋರಾಟಗಳನ್ನು ಬಲಪಡಿಸಲು ತೀರ್ಮಾನಿಸಲಾಯ್ತು. ಅಕ್ಟೋಬರ್ 27 ಮತ್ತು 28 ರಂದು ನಗರದಲ್ಲಿ ಜಿಲ್ಲಾ ರೈತ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲೂ ನಿರ್ಣಯಿಸಲಾಯ್ತು. ಜಿಲ್ಲಾ ಸಮ್ಮೇಳನದ ಅಂಗವಾಗಿಯೂ, ನಗರದಲ್ಲಿ ನಡೆಯುವ ಕಿಸಾನ್ ಸಭಾ ಕೇಂದ್ರ ಸಮಿತಿ ಸಭೆಯ ಮುಕ್ತಾಯ ಸಮಾರಂಭದ ಅಂಗವಾಗಿಯೂ 28 ರಂದು ನಗರದಲ್ಲಿ ರೈತ-ಕಾರ್ಮಿಕರ ಬೃಹತ್ ಮೆರವಣಿಗೆ, ಸಭೆಗಳನ್ನು ಜರಗಿಸಲು ನಿರ್ಣಯಿಸಲಾಯ್ತು. ●

ಕುದುರೆ ಮುಖದಲ್ಲಿ ಸಾಂಕೇತಿಕ ಮುಷ್ಕರ

ಎಚ್. ಎಸ್. ಸಿ. ಎಲ್. ನ ಅಖಿಲ ಭಾರತ ಸಮನ್ವಯ ಸಮಿತಿ ಕೊಟ್ಟ ಕರೆಯ ಮೇರೆಗೆ ಕುದುರೆಮುಖದಲ್ಲಿನ ಹಿಂದುಸ್ತಾನ್ ಸ್ಟೀಲ್ ಕನ್‌ಸ್ಟ್ರಕ್ಷನ್ ಲಿ. ನೌಕರರು ಒಂದು ದಿವಸದ ಸಾಂಕೇತಿಕ ಮುಷ್ಕರವನ್ನು ಸೆ. 14 ರಂದು ಆಚರಿಸಿದರು.

ಅಂದು ಕುದುರೆಮುಖ ಬಂದ್ ಕೂಡ ಆಚರಿಸಲಾಯಿತು. ಸಾರ್ವಜನಿಕ ಉದ್ಯಮಗಳ ನೌಕರರು ಹೂಡಿದ್ದ ಸೆ. 14 ರ ಮುಷ್ಕರಕ್ಕೆ ಎಚ್. ಎಸ್. ಸಿ. ಎಲ್. ನ ನೌಕರರು ಬೆಂಬಲ ಸೂಚಿಸಿದರು ಎಂದು ನೌಕರರ ಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ. ○

ಸದಸ್ಯರಿಗೆ ಶುಭಕೋರಿಕೆ

ದ. ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕೋಣಿಗ್ರಾಮದ ಯುವಕ ಮಂಡಳಿಯ ಹಿರಿಯ ಸದಸ್ಯರಾದ ಶ್ರೀ. ಕೆ. ಎಡ್ವಿನ್‌ಡೇಸಕೋಣಿ ಇವರು ಉಚ್ಚ ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳಲಿರುವುದಕ್ಕಾಗಿ ಅವರಿಗೆ ಬೀಳ್ಕೊಡಿಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಆನಂದ ಭಂಡಾರಿ ಅವರು ವಹಿಸಿದ್ದರು. ಕೋಣಿಗ್ರಾಮದ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಕೆ. ಅನಂತ ಪೂಜಾರಿ, ಕೆ. ವೆಂಕಟೇಶ ನಾಯಕ್ ಕೋಣಿ ಮತ್ತಿತರರು ಸನ್ಮಾನಿತರಿಗೆ ಶುಭ ಕೋರಿದರು. ಪ್ರಾರಂಭದಲ್ಲಿ ಶ್ರೀ ಜೋನ್ ಡಿಸೋಜ ಅವರು ಸ್ವಾಗತಿಸಿದರು. ಶ್ರೀ ಕೆ. ಗುರುರಾಜ ಅವರು ವಂದನಾರ್ಪಣೆ ಮಾಡಿದರು. ●

"ಪಂಚತಾರಾ" ನಾಟಕ ಪ್ರದರ್ಶನ

ತಾ. 21-9-79 ರಂದು ಸಂಜೆ ಬೆಂಗಳೂರು ನಗರದಲ್ಲಿ ಹೋಟೆಲ್ ಕಾರ್ಮಿಕರು ತಮ್ಮ ದಿನ ನಿತ್ಯದ ಶೋಷಣೆಯನ್ನು ಜನರಿಗೆ ಮನದಟ್ಟು ಮಾಡಿಕೊಡಲು "ಪಂಚತಾರಾ" ಎಂಬ ನಾಟಕವನ್ನು ದೇವಾಂಗ ಸಂಘದ ಹಾಲ್‌ನಲ್ಲಿ ಅಭಿನಯಿಸಿದರು.

ನಗರದ ಪ್ರಗತಿಪರ ಸಾಂಸ್ಕೃತಿಕ ತಂಡ "ಸಮುದಾಯ"ದವರು ಹೋಟೆಲ್ ಕಾರ್ಮಿಕರ ಹೋರಾಟಕ್ಕೆ ಸಹಾಯದ ರೂಪದಲ್ಲಿ ನಾಟಕ ಪ್ರದರ್ಶನಕ್ಕೆ ಮೇಲುಸ್ತುವಾರಿ ಜವಾಬುದಾರಿ ತೆಗೆದುಕೊಂಡಿದ್ದು, ಇತರ ಸಾಂಸ್ಕೃತಿಕ ತಂಡಗಳಿಗೂ ಒಂದು ಮಾರ್ಗದರ್ಶಕ.

ದಿನಕ್ಕೆ 16ಗಂಟೆ ಕೆಲಸ, ಹೋಟೆಲ್ ಮಾಲೀಕರ ದಬ್ಬಾಳಿಕೆ, ಕಾನೂನನ್ನು ಜಾರಿಗೊಳಿಸುವ ಅಧಿಕಾರಿಗಳ ಭ್ರಷ್ಟಾಚಾರ ಮುಂತಾದವನ್ನು ನಾಟಕದ ದೃಶ್ಯಗಳು ಪ್ರೇಕ್ಷಕರಿಗೆ ಮುಟ್ಟಿಸುವ ರೀತಿ ಚೆನ್ನಾಗಿತ್ತು.

ಅಭಿನಯದ ವಿಶೇಷ ಅನುಭವ ಇಲ್ಲದಿದ್ದರೂ, ನಾಟಕದಲ್ಲಿ ಅಭಿನಯಿಸಿದ ಹೋಟೆಲ್ ಕಾರ್ಮಿಕರ ನಟನೆ ಮೆಚ್ಚುವಂತಿತ್ತು. ನಾಟಕದ ನಿರ್ದೇಶನ ಸಮುದಾಯದ ಕೃಷ್ಣಸ್ವಾಮಿ ಹಾಗೂ ಗುಂಡಪ್ಪ ವಹಿಸಿದ್ದರು.

ಪಂಜಿನ ಮೆರವಣಿಗೆ:

1979ರ ಮೇ ತಿಂಗಳಿಂದಲೂ ಹೋರಾಟದ ಕಣದಲ್ಲಿರುವ ಹೋಟೆಲ್ ಕಾರ್ಮಿಕರು, ತಮ್ಮ ಆಗಸ್ಟ್ 15ರ ಬೃಹತ್ ಹೋರಾಟದ ನಂತರ, ಶೋಷಣೆಯ ವಿರುದ್ಧ ತಮ್ಮ ಯುದ್ಧವನ್ನು ಮುಂದುವರಿಸಿದ್ದಾರೆ. ಪ್ರಗತಿಪರ ಸರಕಾರವೆಂದು ಹೇಳಿಕೊಳ್ಳುವ ದೇವರಾಜ ಅರಸು ಸರಕಾರದ ನಿರ್ಲಕ್ಷ್ಯ, ಅಧಿಕಾರಿಗಳ ದುರ್ವರ್ತನೆ, ಮಾಲೀಕರ ಗೂಂಡಾಗಿರಿಯನ್ನು ವಿರೋಧಿಸಿ, ಹೋಟೆಲ್ ಕಾರ್ಮಿಕರು ತಾ. 2-10-79 ರಂದು ಸಂಜೆ ನಗರದ ನಾನಾ ಭಾಗಗಳಲ್ಲಿ ಪಂಜಿನ ಮೆರವಣಿಗೆ ನಡೆಸಿದರು. ಸಾವಿರಾರು ಕಾರ್ಮಿಕರು ಭಾಗವಹಿಸಿದ್ದ ಈ ಮೆರವಣಿಗೆಗಳ ಸಂಯುಕ್ತ ನಾಯಕತ್ವವನ್ನು ಕಾಂ. ಹಂಜಾ ಮತ್ತು ಕಾಂ. ರಾಜನ್ ವಹಿಸಿದ್ದರು. ಕಾರ್ಮಿಕರ ಉತ್ಸಾಹ ಮತ್ತು ಐಕ್ಯತೆ ಮೆರವಣಿಗೆಯಲ್ಲಿ ಎದ್ದು ಕಾಣುತ್ತಿದ್ದುದು ಗಮನಾರ್ಹ.

○

ಕೋಲಾರ ಜಿಲ್ಲಾ ಭೂಗ್ರಹಣ ಚಳುವಳಿ

ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕು ಯನಮಲಪಾಡಿ ಗ್ರೂಫ್ ಪಂಚಾಯಿತಿಯಲ್ಲಿ ಕಾಂ. ಎಸ್. ಸಿ. ದೊಡ್ಡರೆಡ್ಡಿ (ತಾಲ್ಲೂಕ್ ರೈತಸಂಘ ಕಾರ್ಯದರ್ಶಿ) ಅಶ್ವತ್ಥನಾರಾಯಣ ರೆಡ್ಡಿಯವರ ನೇತೃತ್ವದಲ್ಲಿ ಸಣ್ಣ ರೈತರು ಮತ್ತು ಕೃಷಿಕಾರ್ಮಿಕರು ದೊಡ್ಡ ರೀತಿಯಲ್ಲಿ ಸರಕಾರಿ ಬಂಜರುಭೂಮಿಯನ್ನು ಆಕ್ರಮಿಸಿ ಉಳುಮೆ ಮಾಡಿದರು. ಇದರಲ್ಲಿ ಯನಮಲಪಾಡಿ ಸುತ್ತಲಿನ ಐದು ಹಳ್ಳಿಯ ರೈತರು ಭಾಗವಹಿಸಿದ್ದರು. 1. ಯನಮಲಪಾಡಿ 2. ರಾಗಿಮಾಕನಹಳ್ಳಿ 3. ಮುಸ್ತೂರ್‌ಪಟ್ಣ 4. ಚಿನ್ನರಾಯನಹಳ್ಳಿ 5. ಕಂಬಾಲಪಲ್ಲಿ. ಇವರೆಲ್ಲರೂ ಸೇರಿ ಸುಮಾರು ಎಪ್ಪತ್ತ ಐದು ನೇಗಿಲುಗಳೊಂದಿಗೆ ಸಾಮೂಹಿಕವಾಗಿ ಹೆಚ್ಚುಕಡಿಮೆ 200 ಎಕರೆ ಜಮೀನನ್ನು ಉತ್ತು ಹುರುಳಿಬೀಜವನ್ನು ಬಿತ್ತಿದ್ದಾರೆ. ಇಷ್ಟಾದರೂ ಪೋಲೀಸರು ರೈತರನ್ನು ಹೆದರಿಸುತ್ತಿದ್ದಾರೆ. ಹಾಗೂ ಅಧಿಕಾರಿಗಳು ಪೋಲೀಸರ ಪರವಾಗಿ ಇದ್ದಾರೆ. ನಮ್ಮ ರೈತರು ಧೃತಿಗೆಡದೆ ಇನ್ನೂ ಹೆಚ್ಚಿನ ಭೂಮಿಯನ್ನು ಆಕ್ರಮಿಸಲು ಸನ್ನಾಹನಡೆಸುತ್ತಿದ್ದಾರೆ. ಇದರಲ್ಲಿ 1973ರಲ್ಲಿ ನಡೆದ ಭೂಗ್ರಹಣ ಚಳುವಳಿಯಲ್ಲಿ 100 ಎಕರೆಗಳಿಗಿಂತ ಹೆಚ್ಚಿನ ಭೂಮಿಯನ್ನು ಪಡೆದ ಸಣ್ಣ ರೈತರು ಮತ್ತು ಕೃಷಿಕಾರ್ಮಿಕರು ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡು, ಅಂದಿನಿಂದ ಇಂದಿನವರೆವಿಗೂ ಬೆಳೆ ಬೆಳೆಯುತ್ತಾ ಅದರ ಫಸಲನ್ನು ಅನುಭವಿಸುತ್ತಿದ್ದಾರೆ.

●

ರಸ್ತೆ ಮತ್ತು ಬಸ್ ಸೌಲಭ್ಯದ ಬಗ್ಗೆ ಕ್ರಿಯಾಸಮಿತಿ ರಚನೆ

ಕೋಲಾರ ಜಿಲ್ಲಾ ಚಿಂತಾಮಣಿ ಮತ್ತು ಶಿಡ್ಲಘಟ್ಟ ತಾಲ್ಲೂಕಿನ ಹಳ್ಳಿಗಳಲ್ಲಿ ಹಾದು ಹೋಗುವ ಮುಖ್ಯ ರಸ್ತೆಗಳಾದ ಚಿಂತಾಮಣಿ, ಕುಂದಲಗುರ್ಕಿ ಮಾರ್ಗವಾಗಿ ದೇವಪ್ಪನಗುಡಿ, ಕೈವಾರದಿಂದ ಕುಂದಲಗುರ್ಕಿ ಮಾರ್ಗವಾಗಿ ಏನಿಗದಲೆ, ಶಿಡ್ಲಘಟ್ಟದಿಂದ ಪಲಿಚೇರ್ಲು ಮಾರ್ಗವಾಗಿ ತಲಕಾಯಲಬೆಟ್ಟ ರಸ್ತೆ ಮಾರ್ಗಗಳು ರೂಪಿತವಾಗಿ ನಾಲ್ಕು ಐದು ವರ್ಷಗಳಾದರೂ ಇದುವರೆವಿಗೂ ಆ ರಸ್ತೆಗಳಲ್ಲಿ ಸಾರಿಗೆ ಸೌಕರ್ಯವಿಲ್ಲದೆ, ರಸ್ತೆಗಳಿಗೆ ಹಾಕಿರುವ ಎತ್ತರದ ಮಣ್ಣು ಈಗ ಇಲ್ಲದೇ ರಸ್ತೆಗಳಲ್ಲಿ ನಾಲೆ, ಗುಣಿಗಳು ಬಿದ್ದು ಲಕ್ಷಾಂತರ ರೂ ಖರ್ಚು ಮಾಡಿ ನಿರ್ಮಿಸಿದ ಈ ದಾರಿಗಳು ರೈತರ ಸೌಕರ್ಯಕ್ಕೆ ನಿರುಪಯುಕ್ತವಾಗಿದೆ.

ಈ ರಸ್ತೆಗಳಿಗೆ ಸೇರಿದ ಸುಮಾರು 130 ಹಳ್ಳಿಗಳು ತಮ್ಮ ಪೇಟೆ ಪಟ್ಟಣಗಳಿಗೆ ನಿತ್ಯಬಳಕೆ ವಸ್ತುಗಳಾದ ತರಕಾರಿ, ಮತ್ತು ರಾಗಿ, ಭತ್ತ, ರೇಷ್ಮೆ ಗೂಡುಗಳನ್ನು ಕೊಂಡೊಯ್ಯಲು ಸಾರಿಗೆ ಸೌಕರ್ಯವಿಲ್ಲದೆ ಕಂಗಾಲಾಗಿದ್ದಾರೆ. ಇಗ್ಗೆ ಸುಮಾರು 10ವರ್ಷಗಳಿಂದ ಅಧಿಕಾರಿಗಳಿಗೆ ಈ ಬಗ್ಗೆ ಅನೇಕ ಮನವಿಗಳನ್ನು P. W. D. ಮತ್ತು ರಸ್ತೆಸಾರಿಗೆ ಸಂಸ್ಥೆಗೆ ಅರ್ಪಿಸಿದ್ದರೂ ಸರಕಾರ ಇದುವರೆವಿಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

ಆದ್ದರಿಂದ ಇಲ್ಲಿನ ಹಳ್ಳಿಗಳ ರೈತರು ಅನ್ಯಮಾರ್ಗವಿಲ್ಲದೆ ಹೋರಾಟಕ್ಕೆ ಇಳಿದಿದ್ದಾರೆ. ಈ ಕಾರ್ಯಕ್ರಮದ ಅಂಗವಾಗಿ ಸದರಿ ಎರಡು ತಾಲ್ಲೂಕಿಗೂ ಸೇರಿದ ರೈತ-ಕಾರ್ಮಿಕರು ಕ್ರಿಯಾಸಮಿತಿ ರಚನೆಮಾಡಿ, ರೋಡ್ ಬಂದ್ ಚಳುವಳಿಯ ಕಾರ್ಯಕ್ರಮವನ್ನು ನಡೆಸಬೇಕೆಂದು ಈ ಸಮಿತಿ ತೀರ್ಮಾನಿಸಿದೆ.

ಕ್ರಿಯಾಸಮಿತಿಯಲ್ಲಿ 85 ಜನ ಸದಸ್ಯರಿಂದ ಕೂಡಿದ್ದು ಈ ಕೆಳಕಂಡ ಪದಾಧಿಕಾರಿಗಳನ್ನು ನೇಮಿಸಿದ್ದಾರೆ.

1. ಡಿ.ಎಂ. ಹನುಮಪ್ಪ-ಅಧ್ಯಕ್ಷರು 2. ಪಿ. ವಿ. ರಾಮಚಂದ್ರಯ್ಯಶೆಟ್ಟಿ-ಉಪಾಧ್ಯಕ್ಷರು. 3. ಕೆ. ಎಂ. ವೆಂಕಟೇಶ್-ಪ್ರಧಾನ ಕಾರ್ಯದರ್ಶಿ 4. ಕೆ.ಹೆಚ್. ಚಿನ್ನಕೇಶವರೆಡ್ಡಿ-ಖಜಾಂಚಿ.

○

ಚಂದ್ರಸಿಂಗ್ ಘರ್ವಾಲಿಯವರ ಅಂತ್ಯಕ್ರಿಯೆ

ಇತ್ತೀಚೆಗೆ ನಿಧನ ಹೊಂದಿದ ಚಂದ್ರ ಸಿಂಗ್ ಘರ್ವಾಲಿಯವರ ಅಂತ್ಯಕ್ರಿಯೆಯನ್ನು ಅಕ್ಟೋಬರ್ 2 ರಂದು ದೆಹಲಿಯಲ್ಲಿ ನಡೆಸಲಾಯಿತು. ಆ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳ ಅನೇಕರು ಭಾಗವಹಿಸಿದ್ದರು. ಅವರ ಶವವನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಆಫೀಸಿಗೆ ತಂದಿಡಲಾಗಿತ್ತು. ಸಹಸ್ರಾರು ಜನ ಅಲ್ಲಿಗೆ ಬಂದು ನಿಧನರಾದ ನಾಯಕನಿಗೆ ಶ್ರದ್ಧಾಂಜಲಿಯನ್ನರ್ಪಿಸಿದರು. ಈ ಸ್ವಾತಂತ್ರ್ಯ ಹೋರಾಟಗಾರ ಮತ್ತು ಕ್ರಾಂತಿ ವೀರನಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್, ಕೇಂದ್ರ ಮಂತ್ರಿ ಹೆಚ್. ಎನ್. ಬಹುಗುಣ, ಜನತಾ ಪಕ್ಷದ ಅಧ್ಯಕ್ಷ ಚಂದ್ರಶೇಖರ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ತಾರಕೇಶ್ವರಿಸಿನ್ಹ, ಸಿ. ಪಿ. ಐ. ನಾಯಕರುಗಳಾದ ಜಿ. ಅಧಿಕಾರಿ, ಸೋಹನ್ ಸಿಂಗ್ ಜೋಸ್, ಪ್ರೇಮಸಾಗರ್ ಗುಪ್ತ, ಮತ್ತು ಬಿ.ಡಿ ಜೋಶಿ, ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು, ಕಮಲಾಪತಿತ್ರಿಪಾಠಿ, ಮತ್ತು ಭಗತ್ ಮುಂತಾದವರು ಭಾಗವಹಿಸಿದ್ದರು. ಲೋಕದಳದ ಅಧ್ಯಕ್ಷ ರಾಜ್‌ನಾರಾಯಣ್‌ರವರ ಪರವಾಗಿ ಒಂದು ಪುಷ್ಪಮಾಲೆಯನ್ನು ಅರ್ಪಿಸಲಾಯಿತು.

ಚಂದ್ರಾಸಿಂಗ್‌ರವರ ಮೃತ ಶರೀರವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲಾಯಿತು.

ಹರಿಕಿಷನ್ ಸಿಂಗ್ ಸೂರ್ಜಿತ್ ಮತ್ತಿತರ ನಾಯಕರು ಚಂದ್ರಾಸಿಂಗ್ ಘರ್ವಾಲಿಯವರು ಸ್ವಾತಂತ್ರ್ಯ ಹೋರಾಟಕ್ಕೂ ಪ್ರಜಾಪ್ರಭುತ್ವ ಮತ್ತು ಕಮ್ಯೂನಿಸ್ಟ್ ಚಳುವಳಿಗೆ ಪಟ್ಟ ಶ್ರಮದ ಬಗ್ಗೆ ಭಾಷಣಮಾಡಿದರು. ಮೃತರ ಸ್ಮರಣಾರ್ಥವಾಗಿ ಉತ್ತರ ಪ್ರದೇಶ ಸರ್ಕಾರವು ಘಾರ್‌ವಾಲ್ ಜಿಲ್ಲೆಯ ಕೋಡ್ವಾರ್ ಎಂಬಲ್ಲಿ ಪ್ರತಿಮೆಯನ್ನು ಸ್ಥಾಪಿಸಲು ನಿರ್ಧರಿಸಿದೆ. ○

ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಸಮ್ಮೇಳನ

ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಸಮ್ಮೇಳನವನ್ನು ಅಕ್ಟೋಬರ್ 14ರಂದು ನಡೆಸಲು ತೀರ್ಮಾನಿಸಲಾಗಿದೆ. ಒಂದು ದಿನದ ಈ ಸಮ್ಮೇಳನವು ನಗರದ ದೇವಾಂಗಸಂಘ ಹಾಲಿನಲ್ಲಿ ಬೆಳಿಗ್ಗೆ 9ಗಂಟೆಯಿಂದ ಪ್ರಾರಂಭವಾಗುವುದು. ರಾಜ್ಯದ ಸಿ.ಐ.ಟಿ.ಯು. ಮುಂದಾಳುಗಳು ಇದರಲ್ಲಿ ಭಾಗವಹಿಸುವರು.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಪರಿಸರ

ಕಳೆದ ವಾರದಲ್ಲಿ ನಮಗೆ ನಾಲ್ಕು ದಿವಸಗಳು ಮಾತ್ರ ಕುಡಿಯಲು ನೀರು ಸಿಕ್ಕಿದೆ. ಎರಡು ದಿವಸಗಳು ಉಣ್ಣಲು ಗಂಜಿ ಸಿಕ್ಕಿದೆ.

—ಶ್ರೀ ಬಿಜುರವಿದಾಸ್

(ಬರಗಾಲ ಪೀಡಿತ ಬಿಹಾರ್ ರಾಜ್ಯದ ಭರೋಸ್ವ ಹಳ್ಳಿಯ ಬೇಸಾಯ ಕೂಲಿಗಾರ)

ಇಲ್ಲಿ ಭೀಕರ ಬರಗಾಲ. ಜನರಿಗೆ ತಿನ್ನಲು ಅನ್ನ ಇಲ್ಲ. ಕುಡಿಯಲು ನೀರಿಲ್ಲ. ಆದರೆ "ಹುಚ್ಚು ದೊರೆಗಳು" ಚುನಾವಣೆಗಳಲ್ಲಿ ಮಗ್ನರಾಗಿದ್ದಾರೆ.

ಗೆಳೆಯರೊಬ್ಬರಿಗೆ ಬರೆದಿರುವ ಖಾಸಗಿ ಪತ್ರದಲ್ಲಿ

—ಎ. ಕೃಷ್ಣಮೂರ್ತಿ

(ಉ.ಪ್ರದೇಶದಲ್ಲಿನ ಬನಾರಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಅಧ್ಯಾಪಕ)

ಬರಗಾಲದ ನೆಪದಲ್ಲಿ ಚುನಾವಣೆಗಳು ಮುಂದಕ್ಕೆ ಹೋಗುವುದಿಲ್ಲ.

—ಚರಣ್ ಸಿಂಗ್

ಕಳೆದ 10ವರ್ಷಗಳಲ್ಲಿ ವಿಶ್ವದ 5ಲಕ್ಷಕ್ಕೂ ಹೆಚ್ಚು ಜನರನ್ನು ರಾಜಕೀಯ ಕಾರಣಗಳಿಗಾಗಿ ಕೊಲ್ಲಲಾಗಿದೆ.

—'ಅಮ್ನೆಸ್ಟಿ ಇಂಟರ್‌ನ್ಯಾಷನಲ್' ವರದಿಯಿಂದ

(ಮಾನವ ಹಕ್ಕುಗಳ ಅಗ್ರಮಾನ್ಯ ಹೋರಾಟ ಸಂಸ್ಥೆ)

ಪ್ರಸಕ್ತದಲ್ಲಿ ಆಳುತ್ತಿರುವ ವರ್ಗಗಳ ಕೈಯಲ್ಲಿ ಭಾರತದ ಪಾರ್ಲಿಮೆಂಟರಿ ಪ್ರಜಾಸತ್ತೆಯು ಇನ್ನು ಬಹಳ ಕಾಲ ಸುರಕ್ಷಿತವಾಗಿರಲಾರದು.

'ಡೆಬೋನಿಯರ್'ಗೆ ಕೊಟ್ಟಿರುವ ಸಂದರ್ಶನದಲ್ಲಿ ಸಿ.ಪಿ.ಐ. ನಾಯಕ

—ಭೂಪೇಶ್‌ಗುಪ್ತಾ

ಮುಂಬರುವ ಚುನಾವಣೆಗಳಲ್ಲಿ ಸುಮಾರು 150 ಸ್ಥಾನಗಳಲ್ಲಿ ಸ್ಪರ್ಧಿಸಿ ಒಳ್ಳೆಯ ಫಲಿತಾಂಶವನ್ನೇ ಪಡೆಯಲಿರುವ ಎಡಪಂಥೀಯರು ಮುಂದಿನ ಸರ್ಕಾರ ರಚನೆ ಮತ್ತು ಆ ನಂತರದ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ.

'ನ್ಯೂದಿಲ್ಲಿ'ನಲ್ಲಿ ತರುಣ್ ಗಂಗೂಲಿ

ಮುಂಬರುವ ಲೋಕಸಭಾ ಚುನಾವಣೆಗಳು ಎಲ್ಲ ಎಡಪಂಥೀಯರಿಗೆ ಒಂದು ಪರೀಕ್ಷೆ.

—"ಮಾರ್ಕ್ಸಿಸ್ಟ್ ರಿವ್ಯೂ

ಷಾ ಆಯೋಗ ಒಂದು "ದೊಡ್ಡ ತಮಾಷೆ"

—ಇಂದಿರಾಗಾಂಧಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT